SRI C. M. ARUMUGHAM.— He can say after me. He can hold the House for half an your. If you think that one member is strong and one member is weak, it becomes difficult. Every member has equal right. You kindly see above your head. There is the balance. I want you to hold the balance and control the House, please.

Sri G.B. SHANKARA RAO.— Sir.....

SRI C.M. ARUMUGHAM.— See it again. Everyone will speak for half hour. If disobedience becomes our right and procedure is not followed, we can rise and speak for any length of time.

MR. SPEAKER.— I request the hon. member to please resume his seat.

SRI G.B. SHANKAR RAO.—Sir, I cannot understand. What is all this? I have got a right to say.

MR. SPEAKER.—Please resume your seat.

Now SRI M.V. Rajasekharan will speak.

Private Membrs Resolutions

re : relieving the weaker section of the community from debts after amending the Karnataka Debt Relief Act.

† ಶ್ರೀ ಎಂ. ವಿ. ರಾಜಶೇಖರನ್ (ಉತ್ತರಹಳ್ಳಿ)—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಗಂಗಾಧರನ್ ರವರು ಈ ಮನೆಯ ಮುಂದೆ ಏನೊಂದು ನಿರ್ಣಯವನ್ನು ತಂದಿದ್ದಾರೆ ಅದನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಏಕೆಂದರೆ, ಬಡ ರೈತರ ಜೀವನ ಇವತ್ತಿನ ದಿವಸ ಬಹಳ ಕಷ್ಟಪರಿಸ್ಥಿತಿಯಲ್ಲಿ ನಡೆಯುತ್ತಿದೆ ಕಾರಣ, ಅವರು ಏನು ಸಾಲಗಳನ್ನು ತೆಗೆದುಕೊಂಡಿದ್ದಾರೆ. ಆ ಸಾಲಗಳ ಬಡ್ಡಿ ಅವರ ತಲೆಯ ಮೇಲೆ ಇವತ್ತಿನ ದಿವಸ ಬಹಳ ಬೃಹದಾಕಾರವಾಗಿ ಬೆಳೆದು ಅವರ ಇಡೀ ಜೀವನವೇ ಕಣ್ಣೀರಲ್ಲಿ ಕೈತೊಳೆಯುವ ರೀತಿಯಲ್ಲಿದೆ ಎಂದರೆ ತಪ್ಪಾಗಲಾರದು. ಸ್ವಾಮಿ, ನಾನು ಕೆಲವು ನಿದರ್ಶನಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ಬಡ ರೈತರು ತೆಗೆದು ಕೊಳ್ಳಕ್ಕೆ ಸಾಲ ಸಹಕಾರ ಸಂಘಗಳಿಂದಾಗಲೀ, ಬ್ಯಾಂಕುಗಳಿಂದಾಗಲೀ, ಅಥವಾ ಸರ್ಕಾರದವರು ನಡೆಸುವಂತ ಏನೇನು ಕಾರ್ಪೊರೇಷನ್ನುಗಳಿಂ ಇವ ಆ ಕಾರ್ಪೊರೇಷನ್ನುಗಳಿಂದಾಗಲೀ ಇವರು ಕೊಡತಕ್ಕ ಸಾಲಗಳ ಮೇಲೆ ಹಾಕತಕ್ಕ ಬಡ್ಡಿದರ ಯಾವ ರೀತಿಯಲ್ಲಿದೆ, ಒಂದು ಉದಾಹರಣೆ ಕೊಡುವುದಾದರೆ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ರೈತರಿಗೆ ಸಹಾಯ ಮಾಡುವುದಕ್ಕಾಗಿ ಕೆಲಸ ಮಾಡುತ್ತಿದೆ. ಈ ಕಾರ್ಪೊರೇಷನ್ ರಾಷ್ಟ್ರದಲ್ಲಿ ಹುಟ್ಟಿ ಹೊರಲನೆಯಂ ಬಾರಿಗೆ ಬಂದಾಗ, ಬೇರೆ ವ್ಯಾಪಾರಸ್ಥರು ರೈತರನ್ನು ಹಾಳು ಮಾಡುತ್ತಾರೆ, ಶೋಷಣೆ ಮಾಡುತ್ತಾರೆ ಎಂದು ಹೇಳಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೀರ್ಮಾನ ಮಾಡಿ ಈ ಕಾರ್ಪೊರೇಷನನ್ನು ರಾಷ್ಟ್ರದಲ್ಲಿ ಸ್ಥಾಪನೆ ಮಾಡಿದರು. ಇವತ್ತಿನದಿವಸ ಇಡೀ ರಾಷ್ಟ್ರದಲ್ಲಿ ಮತ್ತು ರಾಜ್ಯದಲ್ಲಿ ಬಡ ರೈತರ ರಕ್ತವನ್ನು ಹೀರತಕ್ಕ ಸಂಸ್ಥೆ ಇದು ಆಗಿದೆ. ಒಂದು ಉದಾಹರಣೆ ಕೊಡುತ್ತೇನೆ, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ೧೯೭೧ನೇ ಇಸವಿಯಲ್ಲಿ ೯ ಪರ್ಸೆಂಟ್ ಬಡ್ಡಿದರದ ಮೇಲೆ ರೈತನಿಗೆ ಬೇಕಾದಂತ ಉಪಕರಣಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡಿದರು. ೧೯೭೫ನೇ ಇಸವಿ ಡಿಸೆಂಬರ್ ೧೯ನೇ ತಾರೀಖಿಗೆ ಬಡ್ಡಿದರವನ್ನು ೧೮ ಪರ್ಸೆಂಟ್ ಮಾಡಿದರು.

ಶ್ರೀ ಪಿ. ಎಂ. ಕುಸನೂರ್—ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಯಾರಿಗೆ ಸಾಲ ಕೊಡುತ್ತಿದೆಯೋ ಗೊತ್ತಿಲ್ಲ.

ಶ್ರೀ ಎಂ. ಪಿ. ರಾಜಶೇಖರನ್—ಮಾನ್ಯ ಮಂತ್ರಿಗಳು ಅಪೆಕ್ಸ್ ಬ್ಯಾಂಕ್ ಚೇರ್ಮನ್ ಆಗಿದ್ದರೂ...

ಶ್ರೀ ಎಸ್. ಆರ್. ಬೊಮ್ಮಾಯಿ—ಒಂದೇ ಸಂಸ್ಥೆಗೆ ೩೫ ಲಕ್ಷ ರೂಪಾಯಿ ಸಾಲ ಕೊಟ್ಟಿದ್ದಾರೆ.

ಶ್ರೀ ವಿ ಎಂ. ಕುಸನೂರ್—ಷೇರು ಕ್ಯಾಪಿಟಲ್ ಕೊಟ್ಟಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ ಮೊದಲು ಸಾಲ ಕೊಟ್ಟು ಅನಂತರ ಷೇರು ಕ್ಯಾಪಿಟಲ್ ಆಗಿದೆ.

ಶ್ರೀ ಎಂ. ವಿ. ರಾಜಶೇಖರನ್—ಅವರ ಅಭಿಪ್ರಾಯ ತಪ್ಪು. ಇವರು ಹೇಳಿದ್ದು ಫ್ಯಾಕ್ಟರಿಗೆ ೩೫ ಲಕ್ಷ ರೂಪಾಯಿ ಕೊಟ್ಟಿರತಕ್ಕುದ್ದು, ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಆ ಕ್ಲೋ ಇಂಡಸ್ಟ್ರಿಯಲ್ ಕಾರ್ಪೊರೇಷನ್‌ನವರು ಸಣ್ಣ ಮತ್ತು ದೊಡ್ಡ ರೈತರುಗಳಿಗೆ ಪಂಪು ಸೆಟ್‌ಗಳನ್ನು ತೆಗೆದುಕೊಳ್ಳುವುದಕ್ಕಾಗಿ ಸಾಲ ಕೊಟ್ಟಿದ್ದಾರೆ. ಇನ್ನು ತಮಗೆ ಗೊತ್ತಿರಬಹುದು, ಮತ್ತು ಟ್ರಾಕ್ಟರುಗಳನ್ನು ಕೊಂಡುಕೊಳ್ಳುವುದಕ್ಕೆ ಸಾಲ ಕೊಟ್ಟಿದ್ದಾರೆ. ಸಣ್ಣ ಪವರ್ ಟಿಲ್ಲರ್ಸ್ ಕೊಂಡುಕೊಳ್ಳುವುದಕ್ಕೆ ಸಾಲ ಕೊಟ್ಟಿದ್ದಾರೆ, ಅಲ್ಲದೆ ನಾನಾ ರೀತಿಯ ವ್ಯವಸಾಯ ಉಪಕರಣಗಳನ್ನು ಕೊಂಡುಕೊಳ್ಳುವುದಕ್ಕೆ ಆಗ್ರೋ ಇಂಡಿಸ್ಟ್ರೀಸ್ ಕಾರ್ಪೊರೇಷನ್‌ನವರು ಸಣ್ಣ, ಮಧ್ಯಮ ಹಾಗೂ ದೊಡ್ಡ ರೈತರುಗಳಿಗೆ ಸಾಲ ಕೊಟ್ಟಿದ್ದಾರೆ. ಇವರ ಒಂದು ಅಗ್ರಿಮೆಂಟ್ ಮೇರೆಗೆ ಬಡ್ಡಿದರವನ್ನು ಎಷ್ಟು ಪರ್ಸೆಂಟ್ ಏರಿಸಿದ್ದಾರೆ ಎನ್ನುವುದನ್ನು ಸದನದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇವರ ಒಂದು ಅಗ್ರಿಮೆಂಟ್ ಪ್ರಕಾರ ೧೯೭೧ರಲ್ಲಿ ೯ ಪರ್ಸೆಂಟ್ ಬಡ್ಡಿ ಇತ್ತು, ೧೯೭೧ರ ಜೂನ್ ೧೦–೭೫ ಪರ್ಸೆಂಟ್ ಆಯಿತು, ಅಲ್ಲಿಂದ ೩೧ನೇ ಡಿಸೆಂಬರ್ ವರೆಗೆ ೧೩ ಪರ್ಸೆಂಟ್ ಆಯಿತು, ೭೩ಕ್ಕೆ ೧೫ ಪರ್ಸೆಂಟ್ ಆಯಿತು ೭೪ರಕ್ಕೆ ೧೭.೧೯ ಪರ್ಸೆಂಟ್ ಆಯಿತು, ೧೯ನೇ ಡಿಸೆಂಬರ್ ೧೯೭೪ಕ್ಕೆ ೧೮ ಪರ್ಸೆಂಟ್ ಆಯಿತು, ಈ ರೀತಿ ೯ ಪರ್ಸೆಂಟ್ ಬಡ್ಡಿ ಇದ್ದುದನ್ನು ೩–೪ ವರ್ಷಗಳಲ್ಲಿ ೧೦೦ ಪರ್ಸೆಂಟ್ ಹೆಚ್ಚಿಸಿದರೆ ರೈತ ಬದುಕುವುದಾದರೂ ಹೇಗೆ? ತಾಪ್ರ ತಿಳಿಸಬೇಕು. ಇದರ ಜೊತೆಗೆ ರೈತ ಕೊಡತಕ್ಕ ಕಂತು ಸ್ವಲ್ಪ ನಿಧಾನವಾದರೂ ೨೦ ಪರ್ಸೆಂಟ್ ಸುಸ್ತಿ ಬಡ್ಡಿ ಹಾಕುತ್ತೀರಿ, ಈ ರೀತಿ ತಾಪ್ರ ಹಾಕುವುದರಿಂದ ಬಡ ರೈತ ಕಾರ್ಪೊರೇಷನ್ನಿಗೆ ೩೮ ಪರ್ಸೆಂಟ್ ಬಡ್ಡಿ ಕೊಡಬೇಕಾಗುತ್ತದೆ. ಸ್ವಾಮಿ, ನಾನು ಸರ್ಕಾರಕ್ಕೆ ಈ ಸಂದರ್ಭದಲ್ಲಿ ಒಂದು ಮಾತು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ ಇನ್ನು ಕೆಲವೇ ವರ್ಷಗಳಲ್ಲಿ. ಬಹಳ ದೂರವಿಲ್ಲ, ನಮ್ಮ ರಾಜ್ಯದ ಎಲ್ಲಾ ರೈತರ ಸ್ವತ್ತುಗಳು, ಅಂದರೆ ಆಸ್ತಿಗಳು, ಸಹಕಾರ ಸಂಘಗಳ, ಬ್ಯಾಂಕುಗಳು, ಕಮರ್ಷಿಯಲ್ ಬ್ಯಾಂಕುಗಳ, ಕಾರ್ಪೊರೇಷನ್‌ಗಳ, ಸರ್ಕಾರದ ಆಸ್ತಿಯಾಗುತ್ತವೆ. ಸ್ವತ್ತಾಗುತ್ತವೆ. ಸ್ವಾಮಿ, ತಮ್ಮ ಮುಖ್ಯಾಂತರ ಸರ್ಕಾರದವರನ್ನು ಕೇಳಿಕೊಳ್ಳುವುದು ಮಾನ್ಯ ಗಂಗಾಧರನ್‌ರವರು ಏನು ನಿರ್ಣಯ ತಂದಿದ್ದಾರೆ ಅದನ್ನು ದಯವಿಟ್ಟು ಒಪ್ಪಿಕೊಳ್ಳಿ, ಏಕೆಂದರೆ, ಈಗಾಗಲೇ ಋಣಪರಿಹಾರ ಕಾಯಿದೆ ಮೇರೆಗೆ ೨೨೦೦ ರೂಪಾಯಿಗಳ ಕೆಡಿಮೆ ಆದಾಯ ಇರುವಂತ ಸಣ್ಣಪುಟ್ಟ ರೈತರುಗಳಿಗೆ ಅನುಕೂಲ ಕಲ್ಪಿಸಿಕೊಟ್ಟಿದ್ದೀರಿ, ಅದೇ ಅನುಕೂಲವನ್ನು ಇನ್ನೂ ಕಷ್ಟದಲ್ಲಿರತಕ್ಕ ಬಡ ರೈತರುಗಳಿಗೆ ಕಲ್ಪಿಸುವುದು ಕಷ್ಟವೇನೂ ಆಗುವುದಿಲ್ಲ, ಅದನ್ನು ತಾಪ್ರ ಮಾಡಬೇಕು. ಸ್ವಾಮಿ, ಇವತ್ತು ಒಂದು ಮಾತನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ರೈತ ಹಗಲುರಾತ್ರಿ ತನ್ನ ಜಮೀನಿನಲ್ಲಿ ದುಡಿದು ಬೆಳೆದಂತ ಬೆಳೆಗೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲ. ಇವತ್ತು ರೈತ ಬೀಜ ತೆಗೆದುಕೊಂಡು ಕಾಲಕ್ಕೆ ಸರಿಯಾಗಿ ಬಿತ್ತನೆ ಮಾಡಿ, ಬರತಕ್ಕ ಬೆಳೆಯಲ್ಲಿ ಸಾಲ ಮಗ್ಗೆರೆ ತೀರಿಸುವ ಆಸೆ ಇಟ್ಟುಕೊಂಡಿರುತ್ತಾನೆ, ಬೆಳೆಯೇ ಬರದೆಹೋದರೆ ಅವನು ಮಾಡಿದಂತ ಸಾಲ ತೀರಿಸುವುದಾದರೂ ಹೇಗೆ? ಕಳೆದ ೮–೧೦ ದಿವಸಗಳಿಂದ ಈ ರಾಜ್ಯದಲ್ಲಿ ಏನಾಗಿದೆ. ಈ ರಾಜ್ಯದ ರೈತರು ಜೂನ್ ಮತ್ತು ಜುಲೈ ತಿಂಗಳ ೨–೩ನೇ ವಾರದಲ್ಲಿ ಬಿತ್ತನೆ ಮಾಡಿದರು, ಕಾಲಕ್ಕೆ ಸರಿಯಾಗಿ ಮಳೆ ಬರಲಿಲ್ಲ, ಅವನು ಬಿತ್ತನೆ ಮಾಡಿದಂತ ಬೀಜ ಎಲ್ಲ ಹಾಳಾಗಿ ಹೋಯಿತು, ಇವತ್ತು ರೈತನ ಗತಿ ಏನು? ರೈತ ಪಡೆದಂತ ಸಾಲದ ಮೇಲೆ ಬಡ್ಡಿದರವನ್ನು ಬ್ಯಾಂಕುಗಳು ಹಾಕುತ್ತವೆ, ಅವನು ಬಿತ್ತಿದ ಬೆಳೆಯೇ ಬರದೆ ಹೋದರೆ ಅವನು ಎಲ್ಲಿಂದ ಸಾಲ ಕೊಡುತ್ತಾನೆ. ಅವನು ಕಂತು ಕೊಡದೇ ಹೋದರೆ ಸುಸ್ತಿ ಬಡ್ಡಿ ಹಾಕುತ್ತಾರೆ. ಅವನು ಕೊಡುವ ಬಡ್ಡಿಯೇ ಜಾಸ್ತಿಯಾಗಿರುವಾಗ ಮತ್ತೆ ಅವರ ಮೇಲೆ ಸುಸ್ತಿ ಬಡ್ಡಿ ಹಾಕಿದರೆ ಅವನು ಹೇಗೆ ಕೊಡಬೇಕು? ಇವತ್ತು ರೈತರ ಜೀವನ ಬಹಳ ಕಷ್ಟಪರಿಸ್ಥಿತಿಯಲ್ಲಿದೆ, ಈ ವಿಚಾರವನ್ನು ಮಾನ್ಯ ಮಂತ್ರಿಗಳು ಗಮನಿಸುತ್ತಾರೆಂದು ನಾನು ತಿಳಿಯುತ್ತೇನೆ. ಇವತ್ತು ಈ ನಿರ್ಣಯವನ್ನು ಸಮಸ್ತ ರಾಜ್ಯದ ರೈತ ಜನಾಂಗದ ಹಿತದೃಷ್ಟಿಯಿಂದ ಅವರೆಲ್ಲರ ಬಡ ರೈತರ, ಮಾರ್ಜಿನಲ್ ಸ್ಮಾಲ್ ಫಾರ್ಮರ್ಸ್ ಎಂದು ಏನು ಹೇಳುತ್ತೀವಲ್ಲ ಅಂತಹವರ ಒಂದು ಹಿತದೃಷ್ಟಿಯಿಂದ ನಮ್ಮ ಸರ್ಕಾರದವರು ತಿಳ್ಕೊಳ್ಳ

ಬೇಕೆಂದು ವಿನಂತಿಸಿ ಕೊಳ್ಳುತ್ತೇನೆ. ಇವತ್ತಿನ ದಿವಸ ಸ್ಮಾಲ್ ಫಾರ್ಮರ್ಸ್ ಡೆವಲಪ್‌ಮೆಂಟ್ ಸ್ಕೀಮು ಮೂಲಕ ಸಾಲ ಕೊಡುತ್ತಿದ್ದೀರಿ, ಇವತ್ತು ಬಡ ರೈತ ೧೦೦೦-೨೦೦೦ ರೂಪಾಯಿಗಳ ಸಾಲ ಪಡೆಯಬೇಕಾದರೆ ೫೦೦ ರೂಪಾಯಿ ಖರ್ಚು ಮಾಡಬೇಕು. ಅವನ ಕೈಗೆ ೧,೫೦೦ ಬರುತ್ತದೆ, ಹಣ ಪಡೆದು ೩-೪ ತಿಂಗಳಲ್ಲಿ ಹಿಂದೆಯೇ ಸಾಲ ಮರುಪಾವತಿ ಮಾಡುವ ಬಗ್ಗೆ ನೋಟೀಸ್ ಹೋಗುತ್ತದೆ. ಇವತು ಇಂಥ ಒಂದು ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದ ಎಲ್ಲ ರೈತರೂ ಕೂಡ ಸಾಲಗಾರರಾಗಿದ್ದಾರೆ. ಈ ಸಾಲದ ಹೊರೆಯಿಂದ ಬಡ ರೈತರನು ತಪ್ಪಿಸಬೇಕಾದರೆ, ಅವರಿಗೆ ಅನುಕೂಲ ಕಲ್ಪಿಸಬೇಕಾದರೆ ಗಂಗಾಧರನ್‌ರವರು ತಂದಿರುವ ನಿರ್ಣಯವನ್ನು ತಾವು ಒಪ್ಪಿಕೊಳ್ಳಬೇಕು, ಒಪ್ಪಿಕೊಳ್ಳಲೇಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇಲ್ಲದೆ ಹೋದರೆ ನಾನು ಹೇಳಿದ ಹಾಗೆ ಎಲ್ಲಾ ರೈತರ ಆಸ್ತಿ ಸರ್ಕಾರದ ಸ್ವತ್ತಾಗುತ ದೆ, ಬ್ಯಾಂಕುಗಳ ಸ್ವತ್ತಾಗುತ್ತದೆ. ತಾವು ಇದನ್ನು ತಪ್ಪಿಸಬೇಕು. ಸ್ವಾಮಿ, ತಮಗೆ ಗೊತ್ತಿರುವ ಹಾಗೆ, ಸರ್ಕಾರಕ್ಕೆ ಗೊತ್ತಿರುವ ಹಾಗೆ ನಮ್ಮ ರೈತರಿಗೆ ಹಣ ಸಾಲದು. ನಮ್ಮ ರಾಜ್ಯದ ರೈತರಿಗೆ ೩೦೦ ಕೋಟಿ ರೂಪಾಯಿ ಸಾಲ ಬೇಕಾಗುತ್ತದೆ. ಇವತ್ತು ೩೦೦ ಕೋಟಿ ರೂಪಾಯಿಗಳನ್ನು ಸರ್ಕಾರದವರು ಒದಗಿಸುವುದಕ್ಕೆ ಸಾಧ್ಯವಾಗದೆ ಹೋದರೂ ಅರ್ಧದಷ್ಟಾದರೂ ಸರ್ಕಾರದವರು ಒದಗಿಸುವುದಕೆ ಸಾಧ್ಯವಿದೆ. ಇನ್ನು ೧೫೦ ಕೋಟಿ ರೂಪಾಯಿಗಳನ್ನು ಬೇರೆ ಮೂಲಗಳಿಂದ ಒದಗಿಸುವ ವ್ಯವಸೆ ಮಾಡಬಹುದು.

ಶ್ರೀ ಬಿ. ವಿ. ಕಕ್ಕಿಲಾಯ—ಸ್ವಾಮಿ, ಇವತ್ತು ತಂದಿರುವ ನಿರ್ಣಯ.

"This Assembly recommends to Government to bring an amendment to the Karnataka Debt Relief Act to relieve the weaker section of the Community from the Debt advanced by the Banks, Government and Co-operative Societies." ಎಂದು ಇದೆ.

ಇವರು ಚರ್ಚೆಗೆ ತೆಗೆದುಕೊಂಡಿರುವುದು ಬೇರೆ ವಿಚಾರ. ವಿಕರ್‌ಸೆಕ್ಷನ್‌ಗೆ ಪರಿಹಾರ ಯಾವ ರೀತಿ ಒದಗಿಸಬೇಕು ಎನ್ನುವುದರ ಬಗ್ಗೆ ನಾವು ಇಲ್ಲಿ ತಿಳಿದುಕೊಳ್ಳುವ ಉದ್ದೇಶದಿಂದ ಕುಳಿತಂಕೊಂಡಿದ್ದೇವೆ.

ಶ್ರೀ ಕೆ. ಬಿ. ಮಲ್ಲಪ್ಪ—ನಮ್ಮ ಭಾರತ ದೇಶದಲ್ಲಿ ೮೦ ಪರ್ಸೆಂಟ್ ಹಳ್ಳಿಗಳಿಂದ ಕೂಡಿದ್ದು ಹಳ್ಳಿಯ ಜನರ ವಿಚಾರವನ್ನು ಕುರಿತು ಮಾತನಾಡುತ್ತಿರಬೇಕಾದರೆ ಶ್ರೀಮಾನ್ ಕಕ್ಕಿಲಾಯರವರು ಸಿಟು ಮಾಡಿಕೊಳ್ಳುತ್ತಿರುವುದನ್ನು ನೋಡಿದರೆ ಇನ್ನು ಯಾರ ವಿಚಾರವನ್ನು ಮಾತನಾಡಬೇಕೆಂಬುದನ್ನು ಮಾನ್ಯ ಅಧ್ಯಕ್ಷರೇ ಹೇಳಬೇಕು.

ಶ್ರೀ ಬಿ. ವಿ. ಕಕ್ಕಿಲಾಯ—ಅವರ ವಿಚಾರವನ್ನೇ ಮಾತನಾಡುತ್ತಿಲ್ಲವೆಂದು ಹೇಳುತ್ತಿರುತ್ತೇನೆ.

ಶ್ರೀ ಎಂ. ವಿ. ರಾಜಶೇಖರನ್—ನನಗೆ ಬಹಳ ವ್ಯಸನವಾಗುತ್ತಿದೆ, ಶ್ರೀಮಾನ್ ಕಕ್ಕಿಲಾಯರವರು ಕಾರ್ಮಿಕ ನಾಯಕರು ಅವರು ತಿಳಿದುಕೊಳ್ಳಬೇಕು ಹಳ್ಳಿಗಳಲ್ಲಿ ವೀಕರ್ ಸೆಕ್ಷನ್ ಎಂದರೆ ೮೦ ಪರ್ಸೆಂಟ್ ಸಣ್ಣ ರೈತರು ಏನು ಇರುತ್ತಾರೆ ಅವರನ್ನು ವೀಕರ್ ಸೆಕ್ಷನ್ ಎಂದು ಹೇಳಿದರೆ ತಪ್ಪಾಗಲಾರದು. ಅದರ ಜೊತೆಗೆ ಆರ್ಟಿಸಾನ್ಸ್, ಅಗ್ರಿಕಲ್ಚರಿಸ್ಟ್ ಇವರೆಲ್ಲರೂ ವೀಕರ್ ಸೆಕ್ಷನ್ನೇ ಆಗಿರುತ್ತಾರೆ. ಅಗ್ರಿಕಲ್ಚರ್ ಲೇಬರರ್ಸ್ ಸಣ್ಣ ರೈತರನ್ನು ಅವಲಂಬಿಸಿರುತ್ತಾರೆ. ಸಣ್ಣ ರೈತರು ಇವರನ್ನು ಅವಲಂಬಿಸಿರುತ್ತಾರೆ I am not worried about the big farmers who constitute a very marginal percentage. The weaker section according to me, consits of agricultural labourers and village artisans and these are the people who contribute their mite to the state exchequer. I am very much concerned about them. ಆದುದರಿಂದ ಈವತ್ತಿನ ದಿವಸ ಶ್ರೀ ಗಂಗಾಧರನ್‌ರವರು ಏನು ನಿರ್ಣಯವನ್ನು ಮಂಡಿಸಿದ್ದಾರೆ. ಅದನ್ನು ಡ್ರಾಫ್ಟ್ ಮಾಡುವಾಗ ಸರಿಯಾಗಿ ಯೋಚನೆ ಮಾಡಿಯೇ ಮಾಡಿದ್ದಾರೆ. ನಾನು ಪ್ರಸ್ತಾಪ ಮಾಡುವದು ಏನೆಂದರೆ ಸರ್ಕಾರದವರು ಬಹಳ ಸುಲಭವಾಗಿ ಬೇರೆಯವರು ಕೊಟ್ಟಿರತಕ್ಕಂಥ ಹಣವನ್ನು ಬಿಟ್ಟುಬಿಡಿ ಎಂದು ಏನು ಹೇಳುತ್ತಿದ್ದಾರೆ, ಅದನ್ನು ಸಮರ್ಥನೆ ಮಾಡುವುದರಲ್ಲಿ ನಾನು ಒಬ್ಬನಿದ್ದೇನೆ. ಆದರೇ ಆದೇ ರೀತಿಯಲ್ಲಿ ಎಕ್ಸ್‌ಪ್ಲಾಯಟರ್ಸ್ ಯಾರು ಇರುತ್ತಾರೆ. ಸಣ್ಣ ಸಣ್ಣ ರೈತರನ್ನು ವೀಕರ್ ಸೆಕ್ಷನ್‌ರವರ ಕಡೆಯಿಂದ

ಸಂಲಿಗೆಯನ್ನು ಮಾಡುತ್ತಿದ್ದಾರೆ ಅವರ ಕಡೆಗೆ ಹೆಚ್ಚಿನ ಗಮನವನ್ನು ಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ ೯ ಪರ್ಸೆಂಟ್, ೧೫ ಪರ್ಸೆಂಟ್ ೧೮ ಪರ್ಸೆಂಟ್ ಬಡ್ಡಿಯನ್ನು ವಸೂಲು ಮಾಡುತ್ತಿರುವ ಮಾರ್ವಾಡಿಗಳನ್ನು ಪ್ರಶ್ನೆ ಮಾಡುತ್ತೀರಿ. ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೀರಿ, ಆದರಂತೆ ಈವತ್ತಿನ ದಿವಸ ರೈತರಿಂದ ಬಡ್ಡಿಯನ್ನು ವಸೂಲು ಮಾಡುತ್ತಿರತಕ್ಕಂಥ ಸರ್ಕಾರ, ಕಮರ್ಶಿಯಲ್ ಬ್ಯಾಂಕ್ಸ್, ಕೋ-ಆಪರೇಟಿವ್ ಸೊಸೈಟಿಗಳು ದೊಡ್ಡ ಮಾರ್ವಾಡಿಗಳಾಗಿವೆ ಎಂದು ಹೇಳಿದರೆ ತಪ್ಪಾಗಲಾರದು. ಈ ದೇಶದ ಆಡಳಿತವನ್ನು ಯಾರಿಗೋಸ್ಕರ ಮಾಡಬೇಕಾಗಿದೆ ಎಂದು ಈವತ್ತಿನ ದಿವಸ ಕೇಳಬೇಕಾಗಿರುತ್ತದೆ. ಯಾವ ಸರ್ಕಾರ ಜನರ ಹಿತರಕ್ಷಣೆಗೋಸ್ಕರ ಕೆಲಸ ಮಾಡಬೇಕಾಗಿದಿಯೋ ಅದಕ್ಕೆ ಬದಲಾಗಿ ಈವತ್ತಿನ ದಿವಸ ಎಕ್ಸ್‌ಪ್ಲಾಯಟಿರ್ಸ್‌ಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಆಡಳಿತವನ್ನು ನಡೆಸುತ್ತಿರುವಿರಿ ಎನ್ನುವ ವಿಚಾರವನ್ನು ತೀರ್ಮಾನವಾಗಿ ಹೇಳಬಯಸುತ್ತೇನೆ. ೫೦೦ ರೂಪಾಯಿಗಳಿಗೆ ೧೦೦ ರೂಪಾಯಿ ಸರ್ವೀಸ್ ಚಾರ್ಜ್‌ಸ್ ಎಂದು ರೈತರಿಂದ ವಸೂಲು ಮಾಡುತ್ತಿರಬೇಕಾದರೆ ರೈತರು ಅವರ ಜೀವನವನ್ನು ಹೇಗೆ ಉತ್ತಮಪಡಿಸಿಕೊಳ್ಳಲು ಸಾಧ್ಯವಾಗುತ್ತದೆಂದು ಕೇಳುತ್ತೇನೆ. ಬಡವರ ವಿಚಾರದಲ್ಲಿ ವಿಕರ್‌ಸೆಕ್ಷನ್ ವಿಚಾರದಲ್ಲಿ ಅನುಕಂಪವನ್ನು ಹೊಂದಿದ್ದೇವೆಂತು ಹೇಳುವುದು ಬರಿ ಬಾಯಿಮಾತಾಗಿದೆಯೇ ಹೊರತು ಕಾರ್ಯರೂಪದಲ್ಲಿ ಬಂದಿಲ್ಲವೆಂದು ಬಹಳ ವ್ಯಸನದಿಂದ ಹೇಳುತ್ತಿದ್ದೇನೆ. ಆದ್ದರಿಂದ ಸರ್ಕಾರವನ್ನು ಬಹಳ ವಿನಯದಿಂದ ಕೇಳಿಕೊಳ್ಳುವುದೇನೆಂದರೆ ರೈತರಿಗೆ ಫೀನಲ್ ಇಂಟರೆಸ್ಟನ್ನು ಹಾಕಿರುವುದು ಇದನ್ನು ಆದಷ್ಟು ಜಾಗ್ರತೆ ಮನ್ನ ಮಾಡಬೇಕು. ಶ್ರೀ ಗಂಗಾಧರ್‌ರವರು ಹೇಳಿದ ಹಾಗೆ ಯಾರು ರೈತರು ಸರ್ಕಾರದಿಂದಲೇ ಆಗಲಿ, ಬ್ಯಾಂಕ್‌ಗಳಿಂದಲೇ ಆಗಲಿ, ಕೋ ಆಪರೇಟೀವ್ ಇನ್‌ಸ್ಟಿಟ್ಯೂಷನ್‌ಗಳಿಂದಲೇ ಆಗಲಿ, ಯಾರು ರೈತರು ಸಾಲವನ್ನು ಪಡೆದಿರುತ್ತಾರೆ ಅವರಿಗೆ ಯಾವ ರೀತಿ ಡೆಟ್ ರಿಲೀಫ್ ಆಕ್ಟ್‌ನ್ನು ಜಾರಿಗೆ ತಂದುಸ್ಟರಿಲೀಫ್ ಕೊಟ್ಟಿರುತ್ತೀರಿ ಅದರಂತೆಯೇ ರಿಲೀಫ್‌ಕೊಡಬೇಕೆಂಗು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ಈ ಒಂದು ನಿರ್ಣಯ ರಾಜ್ಯದಲ್ಲಿ ಇರತಕ್ಕಂತ ಸಣ್ಣ ರೈತರು, ಮಾರ್ಜಿನಲ್ ಫಾರ್ಮರ್ಸ್ ಮತ್ತು ವೀಕರ್ ಸೆಕ್ಷನ್ಸ್ ಎಂದರೆ ಆರ್ಟಿಸಾನ್ಸ್ ಏನು ಇರುತ್ತಾರೆ ಅವರ ಬಗ್ಗೆ ಪೂರ್ಣವಾಗಿ ಸಮರ್ಥನೆ ಮಾಡುತ್ತಾ ಆದಷ್ಟು ಜಾಗ್ರತೆ ಸರ್ಕಾರದವರು ಈ ದಿಸೆಯಲ್ಲಿ ತಮ್ಮ ಹೆಜ್ಜೆಯನ್ನು ಮುಂದಿಟ್ಟು ಅವರಿಗೆ ಅನುಕೂಲವನ್ನು ಮಾಡಿಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಎನ್. ರೆಡ್ಡಿ (ಮಾಲೂರು).—ಮಾನ್ಯ ಅಧ್ಯಕ್ಷರೆ ಈ ರೆಸಲ್ಯೂಷನ್ ಏನು ತಂದಿರುತ್ತಾರೆ ; ಇದನ್ನು ನೋಡಿದ ತಕ್ಷಣ ನನಗೆ ವೈಯಕ್ತಿಕವಾಗಿ ಅನಿಸುತ್ತದೆ, ನಾವು ಕರ್ನಾಟಕ ರಾಜ್ಯವನ್ನು ರಕ್ಷಿಸುವುದರ ಜೊತೆಗೆ ಭಾರತವನ್ನೇ ರಚಿಸುವುದಕ್ಕೆ ಹೋಗಬೇಕು ಎಂದೆನಿಸುತ್ತದೆ. ನಾನು ಕೂಡ ಬ್ಯಾಂಕ್‌ನಲ್ಲಿ ಕೇವಲ ಆಗ್ರಿಕಲ್ಚರಿಸ್ಟ್ ಆಗಿ ಸಾಲವನ್ನು ತೆಗೆದುಕೊಂಡಿರುತ್ತೇನೆ. ಬ್ಯಾಂಕ್‌ಗಳಿಂದ, ಕೋ ಆಪರೇಟೀವ್ ಸೊಸೈಟಿಗಳಿಂದ ಪಡೆದಂಥ ಸಾಲವನ್ನು ಮಾಫಿ ಮಾಡುತ್ತೇವೆಂದರೆ ಅದು ಒಂದು ರೀತಿಯಲ್ಲಿ ಸಂತೋಷಪಡಬೇಕಾದ ವಿಚಾರವೆಂದೇ ಹೇಳಬಹುದು. ಆದರೆ ಹಿಂದೆ ಡೆಟ್ ರಿಲೀಫ್ ಆಕ್ಟ್ ತಂದದ್ದು ಹಿಂದೆ ನಾವು ಪರಕೀಯರಾದಂಥ ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಪಡೆದರೂ ಇನ್ನೂ ನಮ್ಮ ಬಂಡವಾಳಶಾಹಿಯವರಿಂದ ಸ್ವಾತಂತ್ರ್ಯವನ್ನು ಪಡೆದಿಲ್ಲ. ಅವರು ನಮ್ಮನ್ನು ಗುಲಾಮರಾಗಿ ಇಟ್ಟುಕೊಂಡು ರಕ್ತವನ್ನು ಕುಡಿಯುತ್ತಿದ್ದಾರೆ. ಇಂಥವರಿಂದ ವಿಮುಕ್ತರನ್ನಾಗಿ ಮಾಡಬೇಕೆಂದೇ ಭಾರತ ರಾಷ್ಟ್ರೀಯ ಸರ್ಕಾರದವರು ಈ ಬಂದು ಕಾನೂನನ್ನು ಜಾರಿಗೆ ತಂದರು. ಅದನ್ನು ಕರ್ನಾಟಕ ಸರ್ಕಾರದವರೂ ಕೂಡ ಕಾರ್ಯಾಚರಣೆಗೆ ತಂದರು. ಇದು ಎಲ್ಲರೂ ಸಂತೋಷಪಡಬೇಕಾದಂಥ ವಿಚಾರವಾಗಿರುತ್ತದೆ. ಏತಕ್ಕೆಂದರೆ ನಮ್ಮ ವಿರೋಧಪಕ್ಷದ ಸದಸ್ಯರು ಸಮಾಜದವಾದದ ಹಾದಿಯಲ್ಲಿ ಹೋಗಬೇಕು ಎಂದು ಹೇಳುವವರು ಕೂಡ ಇದಕ್ಕೆ ಸಮಂಜಸವಾದ ಉತ್ತರವನ್ನು ಕೊಡುತ್ತಾರೆಂದು ಭಾವಿಸುತ್ತೇನೆ. ಆದರೆ ಇವರು ಏನು ತರಾವು ತಂದಿರುತ್ತಾರೆ ಸಹಕಾರಿ ಬ್ಯಾಂಕುಗಳ ಜೊತೆಗೆ ಕೋ ಆಪರೇಟೀವ್ ಸೊಸೈಟಿಗಳಲ್ಲಿ ಸಾಲವನ್ನು ತೆಗೆದುಕೊಂಡಿರುವವರೆಲ್ಲರೂ ಸಾಮಾನ್ಯವಾಗಿ ಬಡವರೇ ಇರುತ್ತಾರೆ, ಆದರೆ ಸಹಕಾರಿ ಬ್ಯಾಂಕುಗಳಿಗೆ ಮಾಡ್ರು ಹೇಗೆ ಬಂತು, ಎಷ್ಟು ಇದೆ ಇದನ್ನೆಲ್ಲ ಸ್ವಲ್ಪ ತರಾವು ತಂದವರು ಮನಸ್ಸಿಗೆ ತೆಗೆದುಕೊಂಡು ಯೋಚನೆ ಮಾಡಿದ್ದರೆ ಖಂಡಿತವಾಗಿಯೂ ಈ ತರಾವನ್ನು ತರುತ್ತಾ ಇರಲಿಲ್ಲ. ಅಪೆಕ್ಸ್ ಬ್ಯಾಂಕ್‌ನಿಂದ ಆಗ್ರಿಕಲ್ಚರಿಸ್ಟ್ ತೆಗೆದುಕೊಂಡ ಸಾಲ ಬರಬೇಕಾದ್ದು ಬಾಕಿ ೮೦ ಕೋಟಿ ರೂಪಾಯಿಗಳು ಇದೆ. ಅದೇ ರೀತಿಯಲ್ಲಿ ಸೆಂಟ್ರಲ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನವರಿಗೆ ರೈತರು ಕೊಡಬೇಕಾದ್ದು ೧೧೦ ಕೋಟಿ ರೂಪಾಯಿಗಳು ಇರುತ್ತದೆ.

ಇದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಲ್ಯಾಂಡ್ ಬ್ಯಾಂಕ್‌ನಲ್ಲಿ ಹೋದ ವರ್ಷ ನಮ್ಮ ರೈತರಿಗೆ ಕೊಟ್ಟಿರುವ ಸಾಲ ೨೫ ಕೋಟಿ ರೂಪಾಯಿಗಳು. ಇದೆಲ್ಲವನ್ನು ಅವರು ಮರೆತು ಬಿಟ್ಟಿರುವಂತೆ ಕಾಣುತ್ತಿದೆ. ರಿಸರ್ವ್ ಬ್ಯಾಂಕ್‌ನವರು ಅಪೆಕ್ಸ್ ಬ್ಯಾಂಕ್‌ನವರಿಗೆ ೫೦ ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ವರ್ಷ ವರ್ಷ ಕೊಡುತ್ತಿದ್ದಾರೆ.

೫-೦೦ ಪಿ.ಎಂ.

ಇದನ್ನೆಲ್ಲಾ ತಾವು ಏತಕ್ಕೆ ಯೋಚನೆ ಮಾಡಲಿಲ್ಲವೋ ಏನೋ ನನಗೆ ಗೊತ್ತಾಗಲಿಲ್ಲಾ. ಈ ೮೦ ಕೋಟಿ ರೂಪಾಯಿ ಮತ್ತು ೧೧೦ ಕೋಟಿ ರೂಪಾಯಿ ಬಾಕಿ ಏನು ಇದೆ ಆದನ್ನು ಬಿಟ್ಟುಬಿಡೋಣ ಎಂದರೆ ಆವಾಗ ಸಹಕಾರ ಮಂತ್ರಿಗಳೂ ಬೇಡ. ಮತ್ತು ಇದರಿಂದ ೨ ಲಕ್ಷಕ್ಕಿಂತಲೂ ಹೆಚ್ಚು ಜನ ಉದ್ಯೋಗಿಗಳು ಏನು ಇದ್ದಾರೆ ಅವರಿಗೆ ಕೆಲಸವೇ ಇರುವುದಿಲ್ಲವಾದ್ದರಿಂದ ಆವಾಗ ಈ ಕೋ ಆಪರೇಷನ್ ಇಲಾಖೆ ತಾನೇ ಏತಕ್ಕೆ ಬೇಕಾಗುತ್ತದೆ? ಸಾಲದ ಬಾಕಿ ಸಹಕಾರ ಸಂಘಗಳು ಬ್ಯಾಂಕಿನಿಂದ ಮಾಫಿ ಮಾಡಿ, ಭಾರತ ಸರ್ಕಾರದವರು ಏನಾದರೂ ಇದಕ್ಕೆ ೨೫೦ ಕೋಟಿ ರೂಪಾಯಿ ಕೊಡುತ್ತೇನೆಂದು ಬಂದರೆ ಆವಾಗ ಕೋ-ಆಪರೇಟೀವ್ ಸೊಸೈಟಿಗಳು ಬೇಕಾಗಿಲ್ಲಾ, ಇದರ ಜೊತೆಗೆ ಇದರಲ್ಲಿರುವ ೨ ಲಕ್ಷ ಜನರಿಗೆ ಬೇರೆ ಕಡೆ ಕೆಲಸ ಕೊಡಬೇಕಾಗುತ್ತದೆ. ಇದನ್ನು ಯೋಚನೆ ಮಾಡಿ. ಭಾರತ ಸರ್ಕಾರದಲ್ಲಿ ಜನತಾ ಪ್ರತಿನಿಧಿ ಸರ್ಕಾರ ಇದೆ ಎಂದು ಜನತಾ ಪಾರ್ಟಿಯವರು ಇಂಥಾ ಒಂದು ರೆಸಲ್ಯೂಷನ್ ಆನ್ನು ತಂದರೆ ಅವರು ತಾನೇ ಎಲ್ಲಿಂದ ದುಡ್ಡು ತರಬೇಕು ಹೇಳಿ. ಅವರು ಇನ್ನೆಲ್ಲಿಂದಲೋ ಅಂದರೆ ಬ್ರಿಟನ್ ಅಮೆರಿಕಾ ಮುಂತಾದ ಕಡೆಯಿಂದ ದುಡ್ಡನ್ನು ಸಾಲ ತರಬೇಕಾಗುತ್ತದೆ. ಅವರೂ ಕೂಡ ಹೊರಗಡೆಯಿಂದಲೇ ಈ ಸಾಲ ತರಬೇಕಾಗುತ್ತದೆ. ಈ ರೀತಿಯಾಗಿ ಮಾಡಿ ಪುನಃ ನಮ್ಮನ್ನು ಪರಿಕೀಯರ ಆಳ್ವಿಕೆಗೆ ಮತ್ತೆ ಕಳುಹಿಸಬೇಕೇ ? ಈ ಶಾಸನ ಸಭೆಗೆ ಜನರು ನಮ್ಮನ್ನು ಒಳ್ಳೆಯದನ್ನು ಮಾಡುತ್ತಾರೆಂದು ಕಳುಹಿಸಿರುವಾಗ ಅವರಿಗೆ ಒಳ್ಳೆಯದಾಗುವಂಥಾ ಕೆಲಸಗಳನ್ನು ಮಾಡೋಣ, ಅಂತಹ ಒಳ್ಳೆಯ ಕಾರ್ಯಕ್ರಮಗಳೇನಾದರೂ ತಂದರೆ ಅದನ್ನು ಒಪ್ಪೋಣ. ಅದನ್ನು ಬಿಟ್ಟು ವಿನಾಶ ಕಾಲಕ್ಕೆ ವಿಪರೀತ ಬುದ್ಧಿ ಎಂಬಂತೆ ನನ್ನ ಮನಸ್ಸಿಗೆ ಕೆಲವರು ಇಂಥಾ ಒಂದು ರೆಷಲ್ಯೂಷನ್ ಅನ್ನು ತಂದರೆ ಅದು ವಿನಾಶಕ್ಕೆ ಎಡೆ ಕೊಟ್ಟಂತಾಗುತ್ತದೆ. ಆದರೆ ನಾವು ಅಂಥಾ ವಿನಾಶಕ್ಕೆ ಹೋಗುವುದಕ್ಕೆ ಅವಕಾಶ ಕೊಡುವುದಿಲ್ಲ. ಜೊತೆಗೆ ಈ ಬ್ಯಾಂಕಿಂಗಳನ್ನೇ ತೆಗೆದುಕೊಳ್ಳಿ, ಪೆಡ್ಯೂಲ್ ಬ್ಯಾಂಕಿಂಗಳು ತಾನೇ ಎಲ್ಲಿಂದ ಸಾಲ ತರಬೇಕು ಎಂದರೆ ಅವರಿಗೆ ರಿಸರ್ವ್ ಬ್ಯಾಂಕ್‌ನವರು ಕೊಡಬೇಕು. ಕೆನರಾ ಬ್ಯಾಂಕ್ ಆಗಲಿ, ಸಿಂಡಿಕೇಟ್ ಬ್ಯಾಂಕ್ ಆಗಲಿ ಅವರು ರಿಸರ್ವ್ ಬ್ಯಾಂಕ್‌ನಿಂದ ತರಲೇಬೇಕಂ. ಈ ಪ್ರೈವೇಟ್ ಬ್ಯಾಂಕ್‌ಗಳಲ್ಲಿ ಕೆಲವು ಜನರು ಡಿಪಾಸಿಟ್ ಇಟ್ಟು ಅದರ ಬಡ್ಡಿಯಿಂದ ಏನು ಜೀವನ ಮಾಡುತ್ತಿದ್ದಾರೋ ನಿಮ್ಮ ಒಂದು ರೆಸಲ್ಯೂಷನ್‌ನಿಂದ ಅವರಿಗೆ ಈ ಒಂದು ಸೌಲಭ್ಯವೂ ಹೋಗಿ, ಅವರಿಗೆ ಇಂತಾ ಒಂದು ಅವಕಾಶ ಹೋಗಿ ಆ ಬ್ಯಾಂಕ್‌ನಲ್ಲಿರುವವರು ತಮ್ಮ ಒಂದು ಕೆಲಸವನ್ನೂ ಸಹ ಕಳೆದುಕೊಳ್ಳುತ್ತಾರೆ. ಅವರ ಜೀವನವನ್ನು ಹಾಳು ಮಾಡುವುದಕ್ಕೆ ಕಾರಣವಾಗುತ್ತದೆ. ಆದುದರಿಂದ ಇಂತಹ ಒಂದು ರೆಸಲ್ಯೂಷನ್ ಅನ್ನು ಸರ್ಕಾರದ ಡೆಟ್ ರಿಲೀಫ್ ಆಕ್ಟ್‌ನ ಅಮೆಂಡ್‌ಮೆಂಟ್‌ನಲ್ಲಿ ಸೇರಿಸಿ ಆದಕ್ಕೆ ಒಂದು ತಿದ್ದುಪಡಿ ತರುವುದಕ್ಕೆ ಖಂಡಿತ ಅವಕಾಶ ಕೊಡಬೇಡಿ ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಬಡಬಗ್ಗರಿಗೆ ಅನುಕೂಲವಾಗಲಿ ಅನ್ನುವ ದೃಷ್ಟಿಯಿಂದ ೨೪೦೦ ರೂಪಾಯಿನ ಒಳಗೆ ವರಮಾನ ಇರುವವರೆಲ್ಲಾ ಈ ಸಾಲದಿಂದ ಋಣಮುಕ್ತರಾಗಿದ್ದಾರೆ ಅನ್ನುವ ಒಂದು ತಿದ್ದುಪಡಿಯನ್ನು ಹಿಂದೆಯೋ ತಂದಿದ್ದಾರೆ. ಈಗ ಅದನ್ನು ೪೮೦೦ ರೂಪಾಯಿನವರೆಗೆ ತರುತ್ತಾರೆ ಅಂತ ಕೇಳಿದ್ದೇನೆ. ಅಂಥಾದ್ದು ಯಾವುದಾದರೂ ಒಳ್ಳೆಯ ಕೆಲಸ ಮಾಡಿದರೆ ಕೋಟಿಗಟ್ಟಲೆ ಜನಕ್ಕೆ ಉಪಕಾರವಾದಂತಾಗುತ್ತದೆ. ಮತ್ತು ಅವರನ್ನು ಉದ್ಧಾರ ಮಾಡುವುದರ ಜೊತೆಗೆ ಭಾರತ ಸರ್ಕಾರವನ್ನೂ ಸಹ ಉದ್ಧಾರ ಮಾಡಬಹುದು. ಆದುದರಿಂದ ಈ ಒಂದು ರೆಸಲ್ಯೂಷನ್ ಸದ್ಯಕ್ಕೆ ಬೇಡ, ಇದನ್ನು ಪಾಪಸ್ಸು ತೆಗೆದುಕೊಂಡರೆ ಬಹಳ ಸಂತೋಷ ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಎಸ್. ಆರಕೇರಿ (ಬಲ್ಲೋಳಿ).—ಸನ್ಮಾನ್ಯ ಅಧ್ಯಕ್ಷರೇ, ಈ ನಿರ್ಣಯವನ್ನು ಮಾನ್ಯ ಮಿತ್ರರಾದಂಥಾ ಶ್ರೀಮಾನ್ ಗಂಗಾಧರನ್ ಅವರು ತಂದದ್ದು ನಿಜವಾಗಲೂ ಕೂಡ ಬಹಳ ಸಮಯೋಚಿತವಾದುದು ಮತ್ತು ಇದನ್ನು ಇಡೀ ಕರ್ನಾಟಕದ ದೀನದಲಿತರ ದೃಷ್ಟಿಯಿಂದ ಮತ್ತು ಬಡ ರೈತರ ದೃಷ್ಟಿಯಿಂದ ಇದು ಉತ್ತಮವಾದಂಥಾ ನಿರ್ಣಯ ಮತ್ತು ಈ ಸಲಹೆಯನ್ನು ಎಲ್ಲರೂ

ಒಪ್ಪಿಕೊಳ್ಳಬೇಕಾದುದು ಬಹಳ ಆವಶ್ಯಕ ಮತ್ತು ಒಳ್ಳೆಯದು ಎಂದು ಹೇಳಿ ನಾನು ಇದನ್ನು ಅನುಮೋದಿಸುತ್ತಾ ಇದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನನ್ನ ಮಿತ್ರರಾದಂಥಾ ಶ್ರೀಮಾನ್ ರೆಡ್ಡಿಯವರು ಏನು ಹೇಳಿದರು ಎಂದರೆ ಕರ್ನಾಟಕ ರಾಜ್ಯವನ್ನು ರಕ್ಷಣೆ ಮಾಡವುದರ ಜೊತೆಗೆ ಭಾರತ ಸರ್ಕಾರವನ್ನು ರಕ್ಷಣೆ ಮಾಡುವ ಹೊಣೆ ನಮ್ಮ ಮೇಲೆ ಇದೆಯೆಂದು ಹೇಳಿದರು. ಆದರೆ ನಿಮ್ಮ ಸೋಲೋ ಕೇಂದ್ರದ ಆಡಳಿತ ಸಹ ನಮ್ಮ ಕೈಯಲ್ಲಿ ಇದೆ ಅನ್ನುವುದನ್ನು ಅವರು ಮರೆತಂತೆ ಕಾಣುತ್ತದೆ. ಈ ಒಂದು ನಿರ್ಣಯ ನ್ಯಾಯವಾದುದು ಇದೆ. ಈ ಕರ್ನಾಟಕ ಡೆಟ್ ರಿಲೀಫ್ ಆಕ್ಟ್‌ನಿಂದ ಸಾವಿರಾರು ಜನರಿಗೆ ದೀನದಲಿತರಿಗೆ ಮತ್ತು ಹರಿಜನ ಮತ್ತು ಗಿರಿಜನರಿಗೆ ಅನುಕೂಲವಾಗಿದೆ, ಮತ್ತು ಗ್ರಾಮಾಂತರ ಪ್ರದೇಶದಲ್ಲಿರುವ ಕೃಷಿಕರನ್ನು ಋಣ ಮುಕ್ತರನ್ನಾಗಿ ಮಾಡುವಂಥಾ ಈ ಒಂದು ಕಾಯಿದೆ ಏನು ಇದೆ ಇದರಿಂದ ಎಷ್ಟೋ ಜನರಿಗೆ ಅನುಕೂಲವಾಗಿದೆ. ಆದುದರಿಂದ ಇಂಥಾದ್ದಕ್ಕೆ ನಿರ್ಣಯ ತರುಂಥಾದ್ದು ಅಗತ್ಯ ಇದೆ ಅನ್ನುವ ಮಾತನ್ನು ತಾವು ಲಕ್ಷ್ಯದಲ್ಲಿಡಬೇಕು. ಗ್ರಾಮಾಂತರ ಪ್ರದೇಶದಲ್ಲಿರುವ ಹರಿಜನ ಮತ್ತು ಗಿರಿಜನರು ಏನು ಇದ್ದಾರೆ ದುರ್ಬಲ ವರ್ಗದವರು ಏನು ಇದ್ದಾರೆ ಅವರು ಆಯಾ ಊರಿನ ದೊಡ್ಡ ದೊಡ್ಡ ಶ್ರೀಮಂತರಿಂದ ಸಾಲವನ್ನು ಪಡೆದಿದ್ದರು. ಸಾಲ ತೆಗೆದುಕೊಂಡಂತಹ ಇಂಥಾವರು ಇಂಥಾ ಒಂದು ಕಾನೂನು ಪ್ರಕಾರ ಏನು ಋಣ ಮುಕ್ತರಾಗಿದ್ದಾರೆ ಅವರಿಗೆ ಈವೊತ್ತಿನ ದಿವಸ ಬೇರೆ ಎಲ್ಲೂ ಕೂಡ ಸಾಲ ಸಿಗದೇ ಇದೆ. ನಿಮಗೆ ಉದಾಹರಣೆ ಹೇಳುವುದಾದರೆ ಒಬ್ಬ ಬಡ ಕೂಲಿಗಾರನೇ ತೆಗೆದುಕೊಳ್ಳಿ. ಅವನಿಗೆ ಈವೊತ್ತಿನ ದಿವಸ ಬೇರೆ ಸಾಲ ಬೇಕಾದರೆ ಅದಕ್ಕೆ ಪರ್ಯಾಯ ವ್ಯವಸ್ಥೆ ಇಲ್ಲದೆಯಾಗಿದ್ದರಿಂದ ಸಾಲ ಸಿಗುವ ಹಾಗೆ ಮಾಡಿಲ್ಲಾ. ಸರ್ಕಾರವೂ ಕೂಡ ಇದಕ್ಕೆಯಾವ ರೀತಿಯೂ ಸಹಾಯ ಮಾಡುತ್ತಾ ಇಲ್ಲ. ಆವನ ಮಗಳ ಒಂದು ಲಗ್ನವಾಗಬೇಕಾದರೆ ಈವೊತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿ ಸಾಲ ಸಿಗುವುದಿಲ್ಲ, ಅಷ್ಟೇ ಏಕೆ ಸತ್ತ ಹೆಣ ಇದ್ದರೂ ಕೂಡ ಆದರ ಧಫನ ಮಾಡಲು ಒಂದು ಖರ್ಚಿಗೂ ಕೂಡ ಅವನಿಗೆ ಒಂದು ದುಡ್ಡು ಸಾಲ ಸಿಕ್ಕುವುದಿಲ್ಲ. ಇಂಥಾ ಒಂದು ಪರಿಸ್ಥಿತಿ ಗ್ರಾಮಾಂತರ ಪ್ರದೇಶದಲ್ಲಿ ಈವೊತ್ತು ನಿರ್ಮಾಣವಾಗಿದೆ. ಈ ಒಂದು ಕಾನೂನು ತಂದು ೨ ವರ್ಷವಾದರೂ ಕೂಡ ಈವೊತ್ತಿನವರೆಗೆ ಅವರಿಗೆ ಯಾವ ವಿಧವಾದ ಒಂದು ಬೇರೆ ವ್ಯವಸ್ಥೆಯನ್ನು ಕಲ್ಪಿಸಿಲ್ಲಾ ; ಸಾಲ ಸಿಗುವ ಹಾಗೆ ಮಾಡಿಲ್ಲಾ ; ಎಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಆದುದರಿಂದ ಕೂಡಲೇ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥಾ ದೀನದಲಿತರಿಗೆ ಮತ್ತು ಹರಿಜನ ಮತ್ತು ಗಿರಿಜನರಿಗೆ ಒಂದು ಸಣ್ಣ ಪ್ರಮಾಣದ ಸಾಲವಾದರೂ ಕೂಡ ಂದರೆ ೫೦ ರೂಪಾಯಿ ಆಗಲಿ, ೧೦೦ ರೂಪಾಯಿ ಆಗಲಿ, ೨೦೦ ರೂ. ಆಗಲಿ ೧೦೦೦ ರೂಪಾಯಿ ಆಗಲಿ, ೨೦೦೦ ರೂಪಾಯಿ ಆಗಲಿ ತಕ್ಷಣ ಸಾಲ ಸಿಗುವಂತೆ ವ್ಯವಸ್ಥೆ ಮಾಡಿದರೆ ಅವರ ಮಾನ ಮರ್ಯಾದೆಯೂ ಉಳಿಯುತ್ತದೆ. ಈ ವಿಚಾರ ಸಹಕಾರೀ ಮಂತ್ರಿಗಳಿಗೂ ಸಹ ಗೊತ್ತಿದೆ. ಆದುದರಿಂದ ಈ ಒಂದು ವ್ಯವಸ್ಥೆಯನ್ನು ಸಹಕಾರ ಸಂಘಗಳ ಮುಖಾಂತರ ಮಾಡಿಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಅವರಲ್ಲಿ ವಿನವಿ ಮಾಡಿಕೊಳ್ಳುತ್ತೇನೆ. ಕಳೆದ ೩೦ ವರ್ಷಗಳಿಂದ ಒಂದು ಪರ್ಸೆಂಟ್ ಆದರೂ ಕೂಡ ಸಹಕಾರಸಂಘಗಳ ಮುಖಾಂತರವಾಗಲಿ ಅಥವಾ ಸಹಕಾರ ಬ್ಯಾಂಕ್‌ಗಳ ಮುಖಾಂತರವಾಗಲಿ ಈ ಹರಿಜನರಿಗೆ ಸಾಲ ಸಿಕ್ಕಿಲ್ಲಾ. ಒಂದೆರಡು ತಾಲ್ಲೂಕಿನಲ್ಲಿ ಒಬ್ಬಿಬ್ಬರಿಗೆ ಸಿಕ್ಕಿರಬಹುದು ಅಥವಾ ೧೦೦ ಜನ ರೈತರಲ್ಲಿ ಒಬ್ಬಿಬ್ಬ ರೈತರಿಗೆ ಸಿಕ್ಕಿರಬಹುದು. ಆದುದರಿಂದ ಸರ್ಕಾರ ಈಗಲಾದರೂ ಇತ್ತ ಕಡೆ ಗಮನ ಹರಿಸಿ ದೀನದಲಿತರ ಸಲುವಾಗಿ ಮತ್ತು ಹರಿಜನ ಮತ್ತು ಗಿರಿಜನರ ಸಲುವಾಗಿ ಅವರ ಒಂದು ಆರ್ಥಿಕ ಪರಿಸ್ಥಿತಿಯನ್ನು ಗಮನಿಸಿ ಅವರನ್ನು ಉದ್ಧಾರ ಮಾಡಬೇಕು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಅವರೆಲ್ಲಾ ಶ್ರೀಮಂತರ ಸ್ವತ್ತಾಗಿದ್ದಾರೆ. The co-operative movement has not touched the lower stanta of the society and the downtrodeen. Then what is the use of Co-operative movement? They have to go to the doors of the Harijan and Girijan farmers and extend the necessary help and assistance. ಎಷ್ಟೋ ಹರಿಜನರಿಗೂ ಕೂಡ ಒಂದು ಎಕರೆ, ಎರಡು ಎಕರೆ, ೪ ಎಕರೆ ಇಟ್ಟುಕೊಂಡಂಥಾವರಿಗೂ ಸಹ ಸಹಕಾರ ಸಂಘದಿಂದ ಸಾಲ ಕೊಟ್ಟಿಲ್ಲಾ. ಮತ್ತು ಅವರನ್ನು ಆ ಸಹಕಾರ ಸಂಘಕ್ಕೆ ಮೆಂಬರ್‌ನ್ನೂ ಸಹ ಮಾಡಿಲ್ಲಾ. ಇನ್ನು ಸೋಷಿಯಲ್ ವೆಲ್‌ಫೇರ್‌ನವರು ಇವರಿಗೆ ಸಾಲ ಕೊಡಬೇಕು ಅನ್ನುವ ಯೋಚನೆ ಮಾಡಿದ್ದರೂ ಸಹ ಆ ಹರಿಜನ-ಗಿರಿಜನರನ್ನೂ ಇನ್ನೂ ಅಲ್ಲಿಗೆ ಮೆಂಬರ್ ಮಾಡಿಸಿಲ್ಲಾ. ಇಷ್ಟೇ ಅಲ್ಲದೆ ಪಿ.ಎಲ್.ಡಿ.

ಕರ್ನಾಟಕ ವಿಧಾನಮಂಡಲ

ಬ್ಯಾಂಕ್‌ನಲ್ಲಾಗಲಿ ಅಥವಾ ಕ್ರೆಡಿಟ್ ಕೋ ಆಪರೇಟೀವ್ ಸೊಸೈಟಿಯಲ್ಲಾಗಲಿ ಅಲ್ಲೂ ಇವರಿಗೆ ಸಾಲ ಸಿಕ್ಕಲ್ಲಾ. ಆದುದರಿಂದ ಮಾನ್ಯ ಸಹಕಾರ ಸಚಿವರು ಈ ಬಗ್ಗೆ ಗಮನಹರಿಸಿ ಬಡವರಲ್ಲಿ ಬಡವರು ಮತ್ತು ಹರಿಜನ-ಗಿರಿಜನರಿಗೂ ಒಂದು ಸಾಲದ ಬಗ್ಗೆ ಸೌಲಭ್ಯವನ್ನು ಕಲ್ಪಿಸಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಆರ್ಬಿಟ್ರೇಷನ್ ಕೇಸಸ್ ವಿಚಾರವಾಗಿ ಹೇಳುವುದಾದರೆ ಸಣ್ಣ ಸಣ್ಣ ರೈತರು ಏನು ಇದ್ದಾರೆ ಈ ಆರ್ಬಿಟ್ರೇಟರಿಂದ ಅವರ ಮೇಲೆ ಅವಾರ್ಡ್ ತೆಗೆದುಕೊಂಡು ಎಕ್ಸಿಕ್ಯೂಷನ್ ಮಾಡುವಾಗ, ೫೦೦ ರೂಪಾಯಿ ಅವನ ಮೇಲೆ ಎಕ್ಸಿಕ್ಯೂಷನ್ ಆಗಿದ್ದರೆ ೨೦೦ ರೂಪಾಯಿನ ಕಾರ್ ಮಾಡಿಕೊಂಡು ಹೋಗುತ್ತಾರೆ. ಅವನಿಗೆ ೩೦ ದಿವಸ ನೋಟೀಸ್ ಕೊಡಬೇಕು. ಹಾಗೆ ಮಾಡುವುದಿಲ್ಲ. ಪುನಃ ಮತ್ತೆ ಅವನ ಹತ್ತಿರ ಎಕ್ಸಿಕ್ಯೂಷನ್‌ಗೆ ಹೋಗುವಾಗ ಕಾರ್ ಮಾಡಿಕೊಂಡು ಹೋಗಿದ್ದ ಬಾಡಿಗೆ ೨೦೦ ರೂಪಾಯಿಯನ್ನು ಪೆನಾಲ್ಟಿ ಹಾಕಿ ಮತ್ತೆ ಸೇರಿಸಿ ವಸೂಲ್ಮಾಡುತ್ತಾರೆ. ಅವನು ಅದನ್ನು ಕೊಡದೇ ಹೋದರೆ ಅವನ ಮನೆಯ ಅಡಿಗೆ ಮಾಡುವ ಪಾತ್ರೆಗಳನ್ನೋ ಅಥವಾ ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್‌ನ್ನೋ ಯಾವುದನ್ನಾದರೂ ಹರಾಜು ಮಾಡುತ್ತಾರೆ.

Madam Deputy Speaker (Smt. Sumati B. Madiman) in the Chair.

SRI V. M. KUSNOOR.—Madam, the hon'ble Member speaks as if he is speaking on the Demands for Grants. The resolution before the House is about to bring an amendment to the Karnataka Debt Relief Act to relieve the weaker sections of the community from the Debts advanced by the Banks, Government and co-operative Societies. But the hon'ble Member speaks about the loans of the Banks and other things which are not relevant at this juncture.

SRI S. S. ARAKERI.—The Hon'ble Minister has not understood the spirit of my speech. A number of co-operative socities are exploiting the poor people. That has kept in mind. We have to take these people out of the cluthes of the co-operaative societies. ಬಡವರಿಗೆ ಐನೂರು ರೂಪಾಯಿ ಸಾಲ ಕೊಟ್ಟು ಕೊನೆಗೆ ಆ ಸಾಲಕ್ಕೆ ಎರಡು-ಮೂರು ಸಾವಿರ ರೂಪಾಯಿಗಳ ಡಿಕ್ರಿ ಮಾಡಿಕೊಂಡು ಸಾಲವನ್ನು ವಸೂಲು ಮಾಡುತ್ತಿರುವುದು ಬಹಳ ಅನ್ಯಾಯ. ಆದುದರಿಂದ. ಋಣ ಪರಿಹಾರ ಶಾಸನದ ಉಪಯೋಗ ಹಿಂದುಳಿದ ವರ್ಗ ಮತ್ತು ಮಧ್ಯಮ ಪ್ರಮಾಣದ ರೈತರಿಗೂ ಸಿಕ್ಕಬೇಕೆನ್ನುವ ಉದ್ದೇಶದಿಂದ ಈ ನಿರ್ಣಯವನ್ನು ತರಲಾಗಿದೆ. ಸರ್ಕಾರದವರು ಇದನ್ನು ಗಮನದಲ್ಲಿಟ್ಟುಕೊಂಡು ಇದರ ಬಗ್ಗೆ ಋಣ ಪರಿಹಾರ ಶಾಸನದಲ್ಲಿ ಸೂಕ್ತ ತಿದ್ದುಪಡಿಯನ್ನು ಆದಷ್ಟು ಬೇಗ ತರಬೇಕೆಂದು ಹೇಳುತ್ತೇನೆ ಮತ್ತು ಮಾನ್ಯ ಗಂಗಾಧರ್ ಅವರು ಮಂಡಿಸಿರುವ ನಿರ್ಣಯವನ್ನು ಸಂಪೂರ್ಣವಾಗಿ ಬೆಂಬಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† SRI PRABHAKAR TELKAR (Chitapur).—Madam Speaker, the Resolution has been put by Mr. Gangadharan and it reads :

> "This Assembly recommends to Government to bring an amendment to the Karnataka Debt Relief Act to relieve the weaker section of the community from the debts advanced by the banks, government and co-operative societies."

Our Government and the Government at the Centre in 1976 thought of relieving the people who are coming under the definition of the debtor and they should be given protection from the clutches of the sahukars and with that intention the Central Government as well as our Government in Karnataka brought the Karnataka Debtors Relief

Act and by that Act, a person whose income is less than Rs. 2400 and who holds less than 5 acres of dry land was exempted from paying the debt that was to be paid toa sahukar and the burden of debt amounting to crores of rupees was released. Now, with the same idea, Mr. Gangadharan has brought this Resolution and he wants to relieve the weaker sections of the community from the debts that have been advanced by the government, the co-operative societies and the banks. I do appriciate the intention but the difficulty is that under the garb of relieving the weaker sections from the debt, he wants to help the richer class-the big land holders who have got loans from the government, the co-operative societies and also from the banks. The loans were not at all given to the poor people but only the rich people who were holding these socities were just asking for the money and they have grabbed the money. Therefore, what I submit is that there are cases where the societies have just grabbed money under the garb of paying the loan to these people. Therefore, through you, Madam, I request the Minister to take up such cases of co-operative societies where the money has beensaid to have given to the been poorer people but actually the richer classes have taken that money and take action against those persons.

One more thing I want to submit. We want rural development in our State. We want water; we want roads, but if we think of just wiping out this debt, it may amount to more than 500 crores of rupees and it will not be possible to implement the rural developmental works. Therefore, the Resolution that has been brought by my friend at this juncture is not at all correct and I just do not support it.

Let us look at the wording 'weaker section', What is that weaker section of the community? Government has come forward to just relieve the burden of these debts. If by weaker section is meant persons whose income is less than Rs. 2400, then that help government has already given and such people have not taken loan. If we take out the statistics only the richer classes have taken loans. The poor people do not even know the-banks and then where is the question of going to the banks and getting money ? They are illiterate people—people whose income is less than Rs. 2400. They do not know what a society is even. As the member pointed out, even one thousandth of the Harijans have not got money from these institutions. What is the purpose of this Resolution. By this Resolution your intention is to help the weaker sections of the people; you want to help the Harijans and the Girijans. But they have not been taking loan at all. Only the moneyed people who now how to just grab the amount make use of the societies have taken such loans.

Therefore, my submission is that this is not a proper Resolution at this juncture and I just request my friend to withdraw it. Whatever the Government is doing is correct and Government is also thinking of raising the income limit from Rs. 2400 to Rs. 4800 The Govt. is doing its best, for the last 6-7 years and they have come to the rescue of these poorer sections. Therefore, I submit that this Resolution is of no use at this juncture.

With these words, I thank the Chair and conclude my speech.

†ಶ್ರೀ ಜಿ. ಎಸ್. ಶಿವನಂಜಪ್ಪ (ಬೆಳ್ಳಾವಿ). ಮಾನ್ಯ ಅಧ್ಯಕ್ಷಣಿಯವರೇ ನನ್ನ ಗೆಳೆಯರಾದ ಶ್ರೀಮಾನ್ ಗಂಗಾಧರ್ ಅವರು ಈ ಸಭೆಯಮುಂದೆ ತಂದಿರತಕ್ಕ ನಿರ್ಣಯ ಏನಿದೆ ಇದನ್ನು ನಮ್ಮ ಕಾಂಗ್ರೆಸ್‌ನವರು ಅಥವಾ ಜನತಾ ಪಕ್ಷದವರು ರಾಜಕೀಯಕ್ಕೋಸ್ಕರ ತಂದಿದ್ದಾರೆ ಎಂದು ತಿಳಿಯಬಾರದುಎಂದು ನಾನು ಮೊದಲನೆಯದಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಂದು ಉದಾಹರಣೆಯನ್ನು ನಾನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಿಗೆ ತಿಳಿಸುತ್ತೇನೆ, ಇದರ ಒಂದು ವೈಶಿಷ್ಟ್ಯ ಸೊಸೈಟಿಗಳಲ್ಲಿ ಸಾಲ ಕೊಡತಕ್ಕ ನೀತಿ ಏನಿದೆ ಅದರ ಕಷ್ಟ ನಾನು ಹೇಳತಕ್ಕ ಉದಾಹರಣೆಯಿಂದ ಗೊತ್ತಾಗುತ್ತದೆ. ನಾನು ಬೇಲೂರು ಹೋಬಳಿಯಲ್ಲಿ ಪ್ರವಾಸ ಮಾಡುವಾಗ ಒಬ್ಬ ಬಡ ರೈತನಿಂದ ತಿಳಿದು ಬಂತು. ಆ ಬಡ ರೈತ ಪಿ.ಎಲ್.ಡಿ. ಬ್ಯಾಂಕಿನಲ್ಲಿ ೧೭೦೦ ರೂಪಾಯಿಗಳ ಸಾಲ ತೆಗೆದುಕೊಂಡ ಅವನಿಗೆ ಈಗ ೭ ಸಾವಿರ ರೂಪಾಯಿಗಳ ಡಿಮ್ಯಾಂಡ್ ನೋಟೀಸ್ ಬಂದಿದೆ. ಅವನಿಗೆ ೭ ಸಾವಿರ ರೂಪಾಯಿಗಳ ಡಿಮ್ಯಾಂಡ್ ನೋಟೀಸ್ ಹೇಗೆ ಬಂತು ಎಂದರೆ ಅವನು ಸಾಲ ತೆಗೆದುಕೊಂಡ ಹಣದ ಬಾಬ್ತು ಮೊದಲನೆಯ ಕಂತು ಅಸಲು ಬ್ಯಾಂಕಿಗೆ ಕಟ್ಟಲಿಲ್ಲ. ಅದಕ್ಕೆ ಬಡ್ಡಿ, ಇದಕ್ಕೆ ಬಡ್ಡಿ, ಸುಸ್ತಿ ಬಡ್ಡಿ ಇಂಟರೆಸ್ಟಿಗೆ ಸುಸ್ತಿಬಡ್ಡಿ ಎಲ್ಲಾ ಹಾಕಿದರೆ ೧೭೦೦ ರೂಪಾಯಿಗಳ ಸಾಲ ತೆಗೆದುಕೊಂಡಿರತಕ್ಕ ಒಬ್ಬ ಬಡ ರೈತ ೭ ಸಾವಿರ ರೂಪಾಯಿಗಳನ್ನು ಸೊಸೈಟಿಗೆ ಕೊಡಬೇಕು ಎಂದರೆ ಸರ್ಕಾರದವರಿಗೆ ಯಾವ ನೈತಿಕ ಮಟ್ಟ ಇದೆ, ಯಾವ ನೀತಿ ಇದೆ? ೧೭೦೦ ರೂಪಾಯಿಗಳಿಗೆ ೭ ಸಾವಿರ ರೂಪಾಯಿಗಳನ್ನು ತೆಗೆದು ಕೊಳ್ಳುವುದು ಎಲ್ಲಾದರೂ ಪ್ರಪಂಚದಲ್ಲಿ ಉಂಟೇ? ಈಗ ಸರ್ಕಾರದ ಒಂದು ಕಾನೂನು ಪ್ರಕಾರ ಪ್ರೈವೇಟ್ ಪರ್ಸನ್ಸ್ ೨೪೦೦ ರೂಪಾಯಿಗಳ ಆದಾಯ ಇರತಕ್ಕವರಿಗೆ ಸಾಲವನ್ನು ಕೊಟ್ಟಿದ್ದರೆ ಅವರು ಸಾಲವನ್ನು ಕೊಡಬೇಕಾಗಿಲ್ಲ ಆ ಸಾಲ ಹೊರಟು ಹೋಗುತ್ತದೆ ಅದನ್ನು ನಾನು ಒಪ್ಪುತ್ತೇನೆ. ಆದರೆ ೨೪೦೦ ರೂಪಾಯಿಗಳ ಪರಮಾನ ಇರತಕ್ಕ ಒಬ್ಬ ರೈತನಿಗೆ ಸರ್ಕಾರದವರು ಸೊಸೈಟಿಗಳ ಮುಖಾಂತರ ಸಾಲವನ್ನು ಕೊಟ್ಟಿದ್ದರೆ, ಅವನು ವೀಕರ್ ಸೆಕ್ಷನ್ನಿಗೆ ಸೇರಿದ ಕೂಲಿಗಾರನಾಗಿದ್ದರೆ ಅವನು ಸರ್ಕಾರದಿಂದ ಸಾಲ ತೆಗೆದುಕೊಂಡಿರತಕ್ಕದನ್ನು ಏತಕ್ಕೆ ಮನ್ನಾ ಮಾಡರಬಾರದು? ನ್ಯಾಯಬದ್ಧವಾದ ನೀತಿ ನಿಯಮ ಸರ್ಕಾರದಲ್ಲಿ ಇದೆ ಎಂದರೆ ಏತಕ್ಕೆ ಇದನ್ನು ಸರ್ಕಾರ ಮಾಡಬಾರದು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಸಾಹುಕಾರರು ಬಡವರಿಗೆ ಸಾಲವನ್ನು ಕೊಟ್ಟು ಅವರ ರಕ್ತವನ್ನು ಹೀರುತ್ತಾರೆ ಎಂದು ಹೇಳಿ ಸರ್ಕಾರದವರು ಸಹಕಾರ ಸಂಘಗಳ ಮೂಲಕ ೧೭೦೦ ರೂಪಾಯಿಗಳ ಸಾಲವನ್ನು ಬಡ ರೈತನಿಗೆ ಕೊಟ್ಟು ಅವನಿಂದ ೭ಸಾವಿರ ರೂಪಾಯಿಗಳನ್ನು ವಸೂಲು ಮಾಡುವುದರಲ್ಲಿ ಯಾವ ಒಂದು ನೀತಿ ಇದೆ? ಸಾಲದ ವಸೂಲಿಯ ಬಗ್ಗೆ ಮನೆಯನ್ನು ಜಪ್ತಿ ಮಾಡಬೇಕಾದರೆ ಮೊದಲು ನೋಟೀಸ್ ಕೊಡಬೇಕು ಎಂದು ಇದ್ದರೂ ಕೂಡ ಮುಂಚಿತವಾಗಿ ನೋಟೀಸ್ ಕೊಡದೆ ಮನೆಯನ್ನು ಜಪ್ತಿ ಮಾಡಿರತಕ್ಕ ನಿದರ್ಶನಗಳು ಇವೆ. ಕೊರಟಗೆರೆಯ ತಹಸೀಲ್ದಾರರು ಒಬ್ಬ ಬಡ ರೈತನಮನೆಯನ್ನು ರಾತ್ರಿ ೧೨ ಗಂಟೆಯಲ್ಲಿ ಜಪ್ತಿ ಮಾಡಿದ್ದಾರೆ. ಇದು ಯಾವರೀತಿ ಬಡವರನ್ನು ಉದ್ಧಾರ ಮಾಡತಕ್ಕ ಕ್ರಮ ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಅರಿಕೆಮಾಡಿಕೊಳ್ಳುತ್ತೇನೆ. ಪುಸ್ತಕದಲ್ಲಿ ಇರುವುದು ಒಂದು ರೈತರನ್ನು ನೋಡಿಕೊಳ್ಳುವುದು ಒಂದು. ೧೦೦ಕ್ಕೆ ೮೦ರಷ್ಟು ಜನ ರೈತರು ಇದ್ದಾರೆ. ಹಳ್ಳಿಗಾಡುಗಳಲ್ಲಿ ವಾಸ ಮಾಡತಕ್ಕವರಲ್ಲಿ ೧೦೦ಕ್ಕೆ ೭೫ರಷ್ಟು ಜನ ರೈತರಿದ್ದಾರೆ. ೭೫ರಲ್ಲಿ ೬೦ ರಷ್ಟು ಜನ ಬಡ ರೈತರು, ಆದ್ದರಿಂದ ಆಳುವ ಪಕ್ಷದಲ್ಲಿರತಕ್ಕ ಮಿತ್ರರು ಜ್ಞಾಪಿಸಿಕೊಳ್ಳಬೇಕು ಹಳ್ಳಿಗಾಡಿನ ರೈತರ ಸಮಸ್ಯೆಯನ್ನು ಇವೊತ್ತು ಬಗೆಹರಿಸದೇ ಹೋದರೆ ರೈತರ ಗತಿ ಏನಾಗುತ್ತದೆ ? ರೈತರ ಗತಿ ಅದೋಗತಿಗೆ ಹೋಗುತ್ತದೆ. ಬ್ಯಾಂಕುಗಳಲ್ಲಿ ಸಹಕಾರ ಸಂಘಗಳಲ್ಲಿ ಸಾಲ ಮಾಡಿರತಕ್ಕ ರೈತರು ಅದಕ್ಕೆ ಬಡ್ಡಿ ಇದಕ್ಕೆ ಬಡ್ಡಿ ಸುಸ್ತಿ ಬಡ್ಡಿ ಎಲ್ಲಾ ಸೇರಿ ಅಸಲಿಗಿಂತ ಸುಸ್ತಿ ಬಡ್ಡಿಯೇ ಜಾಸ್ತಿಯಾಗಿ ಅನೇಕ ರೈತರು ಬ್ಯಾಂಕುಗಳಲ್ಲಿ ಸಾಲ ತೆಗೆದು

ಕೊಳ್ಳುವ ಹಾಗಿಲ್ಲ, ಸಾಲ ತೆಗೆದುಕೊಂಡರೆ ಅದನ್ನು ವಾಪಸ್ಸು ಕೊಡುವ ಹಾಗಿಲ್ಲ, ನಮಗೆ ತುಮಕೂರು ಜಿಲ್ಲೆಯ ಒಂದು ಉದಾಹರಣೆಯನ್ನು ಕೊಡುತ್ತೇನೆ. ನ್ಯಾಷನಲೈಜ್ ಬ್ಯಾಂಕುಗಳಲ್ಲಿ ಪಾರ್ಟಟಮ್ರ್ ಸಾಲವನ್ನು ಕೊಡುತ್ತಾರೆ. ಆದರೆ ಅದನ್ನು ವಾಪಸ್ಸು ಕೊಡುವ ಸಾಮರ್ಥ್ಯ ಬೇಕು. ತುಮಕೂರು ಜಿಲ್ಲೆಯಲ್ಲಿ ವ್ಯವಸಾಯ ಒಂದು ಗ್ಯಾಂಬ್ಲಿಂಗ್ ಇದ್ದಹಾಗೆ ಅಲ್ಲಿ ಮಳೆ ಬಂದರೆ ಬೆಳೆ ಆಗುತ್ತದೆ, ಇಲ್ಲದಿದ್ದರೆ ಇಲ್ಲ. ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡರೆ ಅದರಲ್ಲಿ ೪೦ ಪರ್ಸೆಂಟ್ ಹಣಕ್ಕೆ ಗೊಬ್ಬರವನ್ನು ತೆಗೆದುಕೊಳ್ಳಬೇಕು ಎಂದು ಕಾನೂನು ಇದೆ. ಗೊಬ್ಬರವನ್ನು ರೈತ ತೆಗೆದುಕೊಂಡು ಹೋಗಿ ಭೂಮಿಯಲ್ಲಿ ಹಾಕುತ್ತಾನೆ. ಮಳೆ ಬಂದು ಬೆಳೆಯಾಗದಿದ್ದರೆ ಅವನು ಸಾಲವನ್ನು ಹೇಗೆ ತೀರಿಸಬೇಕು? ಆಗು ತಿಂಗಳಾದ ಮೇಲೆ ರೈತನಿಗೆ ನೋಟೀಸ್ ಬರುತ್ತದೆ. ರೈತ ಸುಸ್ತಿ ಬಡ್ಡಿ ಕೊಡಬೇಕು ಎಂದು ಒಂದು ಸಾರಿ ಅವನಿಗೆ ನೋಟೀಸ್ ಕೊಟ್ಟರೆ ಆ ನೋಟೀಸಿಗೆ ೨೫ ರೂಪಾಯಿಗಳ ಚಾರ್ಜ್ ಮಾಡುತ್ತಾರೆ. ಇದು ತಲೆ ಹೊಡೆಯುವ ಕೆಲಸ ಅಲ್ಲವೇ? ರೈತರಿಗೆ ವೀಕರ್ ಸೆಕ್ಷನ್ನಿಗೆ ಎಂದರೆ ೫ ಎಕರೆಗಿಂತ ಕಡಿಮೆ ಜಮೀನು ಇರತಕ್ಕವರಿಗೆ ಮತ್ತು ಯಾರ ಪರಮಾನ ೨೪೦೦ ರೂಪಾಯಿಗಳಿಗಿಂತಲೂ ಕಡಿಮೆ ಇದೆಯೋ ಅಂಥವರಿಗೆ ಬಿಹಾರದಲ್ಲಿ ಎಲ್ಲಾ ಸೊಸೈಟಿಗಳಲ್ಲಿಯೂ ಸರ್ಕಾರಿ ಸಾಲವನ್ನು ಕಡಿಮೆ ಮಾಡಿದ್ದಾರೆ. ಆದ್ದರಿಂದ ಅಲ್ಲಿ ಯಾವ ರೀತಿ ಕಡಿಮೆ ಮಾಡಿದ್ದಾರೆ ಎಂಬುದನ್ನು ತಿಳಿದುಕೊಂಡು ಅದೇ ತರಹ ಇಲ್ಲಿಯೂ ಬಡವರಿಗೆ ಯಾರು ಸೊಸೈಟಿಯಲ್ಲಿ ಸರ್ಕಾರಿ ಸಾಲ ತೆಗೆದುಕೊಂಡಿದ್ದಾರೆ ಅಂಥವರನ್ನು ಸಾಲದಿಂದ ವಿಮೋಚನೆ ಮಾಡಬಹುದು. ಹಳ್ಳಿಗಾಡಿನ ರೈತರನ್ನು ಉದ್ಧಾರಮಾಡಬೇಕು ಎಂದು ನಾನು ಮಾನ್ಯ ಸಚಿವರನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ಶ್ರೀಮಾನ್ ಗಂಗಾಧರ್ ಅವರು ಈ ಸಭೆಯಮುಂದೆ ತಂದಿರತಕ್ಕ ನಿರ್ಣಯವನ್ನು ಸರ್ಕಾರದವರು ಒಪ್ಪಿಕೊಳ್ಳಬೇಕೆಂದು ನಾನು ಕಳಕಳಿಯಿಂದ ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಂಡು ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಸ್.ಎಂ. ಶಿರ್ನಾಳಿಚಂದ್ರಶೇಖರ್ (ಹೊಸನಗರ).—ಸ್ವಾಮಿ ಶ್ರೀಮಾನ್ ಗಂಗಾಧರ್ ಅವರು ಈ ಸಭೆಯಮುಂದೆ ತಂದಿರತಕ್ಕ ನಿರ್ಣಯವನ್ನು ನೋಡಿದಾಗ ನನಗೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಇಬ್ಬರು ತಪಸ್ಸಿಗೆ ಕುಳಿತುಕೊಂಡರಂತೆ ಆಗ ಅವರ ತಪಸ್ಸಿಗೆ ಮೆಚ್ಚಿ ದೇವರು ಪ್ರತ್ಯಕ್ಷನಾದ, ದೇವರು ಪ್ರತ್ಯಕ್ಷನಾದ ಮೇಲೆ ಭಕ್ತನನ್ನು ಕುರಿತು ನಿನಗೆ ಏನು ವರಬೇಕೋ ಕೇಳಿಕೋ ಎಂದೆನಂತೆ ಅದಕ್ಕೆ ಆ ಭಕ್ತ ಪಕ್ಕದವನು ಏನು ಕೇಳುತ್ತಾನೆಯೋ ಅದರ ಎರಡಷ್ಟು ನನಗೆ ಕೊಡಬೇಕು ಎಂದು ಕೇಳಿದನಂತೆ, ಆಗ ದೇವರು ಎರಡನೆಯವನ ಹತ್ತಿರ ಹೋಗಿ ನಿನಗೆ ಏನು ವರ ಬೇಕು ಕೇಳಿಕೋ ಎಂದಾಗ ಮೊದಲನೆಯವನು ಏನು ಕೇಳಿದ್ದಾನೆಯೋ ಅದರ ಎರಡಷ್ಟು ನನಗೆ ಕೊಡಬೇಕು ಎಂದಾಗ ದೇವರು ಮೊದಲನೆಯವನು ನನ್ನದು ಒಂದು ಕಣ್ಣು ಹೋಗಲಿ ಎಂದು ಕೇಳಿದ್ದಾನೆ, ಆದ್ದರಿಂದ ನಿನ್ನ ಎರಡೂ ಕಣ್ಣು ಹೋಗುತ್ತವೆ ಎಂದನಂತೆ. ಆ ರೀತಿ ಈ ನಿರ್ಣಯ ಇದೆ, ಋಣ ಪರಿಹಾರ ಕಾಯಿದೆಯಿಂದ ಯಾರು ಯಾರಿಗೆ ಹೊಟ್ಟೆ ನೋವು ಬಂದಿದೆ ಅವರೆಲ್ಲರೂ ಪ್ರೋತ್ಸಾಹ ಕೊಟ್ಟು ಶ್ರಿಮಾನ್ ಗಂಗಾಧರ ಅವರಿಂದ ಈ ನಿರ್ಣಯವನ್ನು ಕಳುಹಿಸುವಂತೆ ಮಾಡಿದ್ದಾರೆ ಎಂದು ನನಗನ್ನಿಸುತ್ತದೆ. ಮತ್ತು ಆರೀತಿ ಹೊಟ್ಟೆನೋವು ಉಂಟಾಗಿರತಕ್ಕ ಪ್ರತಿನಿಧಿಗಳಾಗಿ ಶ್ರೀಮಾನ್ ಗಂಗಾಧರ್ ಅವರು ಈ ನಿರ್ಣಯವನ್ನು ಈ ಸಭೆಯಲ್ಲಿ ತಂದಿದ್ದಾರೆ. ಇದಕ್ಕೆ ಬೇರೆ ಯಾವ ಪೂರ್ವೇಹಿತಿಹಾಸವೂ ಇಲ್ಲ. ಅರ್ಥವೂ ಇಲ್ಲ. ಬಡ ಜನಗಳು ಖಾಸಗೀ ಜನರಿಂದ ಶೋಷಣೆಯಾಗುವುದನ್ನು ವಿಮೋಚನೆ ಮಾಡಬೇಕು ಎಂದು ಒಂದು ಕ್ರಾಂತಿಕಾರಿ ದೃಷ್ಟಿಯನ್ನು ಇಟ್ಟುಕೊಂಡು ಕಳೆದ ಅಧಿವೇಶನದಲ್ಲಿ ತಂದಂತಹ ಕಾನೂನನ್ನು ವಾಪಸ್ಸು ತೆಗೆದುಕೊಳ್ಳಲಿ ಎಂದು ಈ ರೀತಿ ಒತ್ತಾಯ ಮಾಡುತ್ತಿದ್ದಾರೆ. ಅವರು ಈ ಋಣ ಪರಿಹಾರ ಕಾನೂನು ವಾಪಸ್ಸು ಹೋಗುತ್ತದೆ ಎಂದು ತಿಳಿದುಕೊಂಡಿದ್ದರೆ ಖಂಡಿತಾ ಅದು ವಾಪಸ್ಸು ಹೋಗುವುದಿಲ್ಲ. ಆದ್ದರಿಂದ ಈ ನಿರ್ಣಯವನ್ನು ತಂದಿದ್ದರಿಂದ ಯಾವ ಉಪಯೋಗವೂ ಆಗುವುದಿಲ್ಲ. ಶ್ರೀಮಾನ್ ಎಂ. ವಿ. ರಾಜಶೇಖರನ್ ಅವರು ಮಾತನಾಡುತ್ತಾ ರೈತರ ಬಗ್ಗೆ ಸಹಾನುಭೂತಿ ತೋರಿಸಬೇಕು, ಪೀನಲ್ ಇಂಟರೆಸ್ಟ್ ವೇವ್‌ಮಾಡಬೇಕು ಎಂದು ಹೇಳಿದರು. ವೀಕರ್ ಸೆಕ್ಷನ್ನಿಗೆ ಪೀನಲ್ ಇಂಟರೆಸ್ಟ್ ಏನು ಹಾಕಿದ್ದಾರೆ ಅದನ್ನು ವೇವ್ ಮಾಡಬೇಕು ಎಂದು ಹೇಳಿದರು. ಪೀನಲ್ ಇಂಟರೆಸ್ಟ್ ಕೊಡುವವರೆಲ್ಲ ಟ್ರಾಕ್ಟರ್ ಇಟ್ಟುಕೊಂಡಿರುವವರು, ೧೦ ಎಕರೆಗಿಂತ ಮೇಲ್ಪಟ್ಟು ಜಮೀನು ಇಟ್ಟುಕೊಂಡಿರುವವರೇ ಪೀನಲ್ ಇಂಟರೆಸ್ಟ್ ಕೊಡತಕ್ಕವರು, ಪೀನಲ್ ಇಂಟರೆಸ್ಟ್ ಕೊಡುವವರು ಯಾವಾಗಲೂ ವಿಧಾನಸೌಧದಲ್ಲಿ ಮುತ್ತಿರುತ್ತಾರೆ. ಸಣ್ಣಪುಟ್ಟ ರೈತರು ಯಾವಾಗಲೂ ಪೀನಲ್ ಇಂಟರೆಸ್ಟ್ ಕೊಡವುದಿಲ್ಲ. ಈ ಸಣ್ಣಪುಟ್ಟ ರೈತರು ಖಾಸಗೀ ಜನಗಳಿಂದ ಸಾಹುಕಾರರಿಂದ ಸಾಲವನ್ನು ತೆಗೆದುಕೊಂಡು ಶೋಷಣೆಗೆ ಒಳಗಾಗುತ್ತಿದ್ದರು. ಆದ್ದರಿಂದ ಅವರಿಗೆ

ವೀಕರ್ ಸೆಕ್ಷನ್ನಿಗೆ ಸಹಕಾರ ಸಂಘಗಳಿಂದ ವ್ಯವಸ್ಥಿತವಾದ ರೀತಿಯಲ್ಲಿ ಸಾಲವನ್ನು ಕೊಡಬೇಕು ಸರ್ಕಾರದ ಉದ್ದೇಶ ಇದೆ. ಮೊದಲು ಯಾವ ಕಾಲದಲ್ಲಿಯೂ ವೀಕರ್ ಸೆಕ್ಷನ್‌ಗೆ ಸಣ್ಣಪುಟ್ಟ ರೈತರಿಗೆ ಸಾಲವನ್ನು ಕೊಡತಕ್ಕ ವ್ಯವಸ್ಥೆ ಇರಲಿಲ್ಲ, ಆ ಜನಗಳಿಗೆ ಸಹಕಾರ ಸಂಘಗಳಿಂದ ಸರ್ಕಾರದವರು ಸಾಲವನ್ನು ಕೊಡುವುದನ್ನು ತಪ್ಪಿಸಬೇಕು ಎಂದು ನಮ್ಮ ಸ್ನೇಹಿತರಿಗೆ ಇಷ್ಟ ಇದ್ದರೆ ಈ ರೆಸಲ್ಯೂಷನ್ ಅನ್ನು ಪಾಸ್ ಮಾಡಬೇಕಾಗುತ್ತದೆ. ಸರ್ಕಾರದವರು ಕೊಟ್ಟ ಸಾಲವನ್ನು ಜನಗಳು ವಾಪಸ್ಸು ಮಾಡದಿದ್ದರೆ ಮತ್ತೆ ಸಾಲ ಕೊಡಬೇಕಾದರೆ ದುಡ್ಡು ಎಲ್ಲಿಂದ ತರಬೇಕು, ಕೋಟಾನೋಟು ಪ್ರಿಂಟ್ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಯಾವ ಸಹಕಾರ ಸಂಘಗಳಾಗಲೀ ಯಾವ ಬ್ಯಾಂಕುಗಳಾಗಲೀ ಹೇಗೆ ಬದುಕುವುದಕ್ಕೆ ಸಾಧ್ಯ ?

ಶ್ರೀ–ಖಿ ಪಿ.ಎಂ.

ಇವತ್ತು ಏನಾಗಿದೆ ಎಂದರೆ ನಾವು ಮಾಡಿರತಕ್ಕ ಶಾಸನಗಳೂ ಕೂಡ ಕೆಲವು ಬ್ಯಾಂಕ್‌ಗಳ ಆಶೀರ್ವಾದದಿಂದ ನಿಂತಿವೆ. ನಾನು ಈ ಮಾತನ್ನು ಹೇಳಿದರೆ ಮಾನ್ಯ ಸ್ನೇಹಿತರಿಗೆ ಕೋಪ ಬರಬಹುದು ಸಣ್ಣಪುಟ್ಟ ಜನಗಳ ಕಡೆಗೆ ಈ ಬ್ಯಾಂಕ್‌ಗಳು ತಮ್ಮ ಕಣ್ಣನ್ನೂ ಎತ್ತಿ ನೋಡುತ್ತಿಲ್ಲ. ಈ ರಾಷ್ಟ್ರೀಕೃತ ಬ್ಯಾಂಕ್‌ಗಳನ್ನು ಕೇಳುವ ಶಕ್ತಿ ನಮ್ಮ ರಾಜ್ಯ ಸರ್ಕಾರಕ್ಕೆ ಇಲ್ಲ. ಇದನ್ನು ಕೇಂದ್ರ ಸರ್ಕಾರದವರು ಮಾಡಬೇಕು. ನಾವು ಈ ಬಡ ಜನಗಳು ಬದುಕಿಕೊಳ್ಳಲಿ ಎಂದು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ಹಾಕಿದರೆ ಮಾತ್ರ ಈ ಬಡಪಾಯಿಗಳು ಬದುಕಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಾವು ತಂದಿರತಕ್ಕ ಈ ರೆಸಲ್ಯೂಷನ್ ನೋಡಿದರೆ ಆ ಬಡ ಜನಗಳಿಗೆ ಸಿಕ್ಕತಕ್ಕ ಅಲ್ಪಸ್ವಲ್ಪ ಸಾಲವೂ ಕೂಡ ಸಿಕ್ಕುವುದಿಲ್ಲ. ಇವರಿಗೆ ಸಹಾಯವಾಗಲಿ, ಎನ್ನುವ ಮನಸ್ಸು ಇದ್ದರೆ ಸಾಲ ಕೊಡುವಾಗ ಪರ್ಸನಲ್ ಸೆಕ್ಯುರಿಟಿ ಕೊಡಬೇಕೆಂದಿರುವುದನ್ನು ತೆಗೆಯಿರಿ, ಅವರ ವಸ್ತುಗಳನ್ನು ಅಡವು ಇಟ್ಟುಕೊಂಡು ಕೊಡಬೇಕೆಂದಿರುವುದನ್ನು ಬೇಡ ಎಂದು ಹೇಳಿ. ಸುಮ್ಮನೆ ಜನಗಳ ಮೇಲೆ ಈ ರೀತಿ ಮೊಸಳೆ ಕಣ್ಣೀರು ಸುರಿಸುವುದು ಸರಿಯಲ್ಲ. ಇದು ನಿಮಗೆ ಗೋಮುಖ ವ್ಯಾಘ್ರನಂತಿದೆ. ಹೊರಗೆ ಹಸುವಿನ ಮುಖ, ಒಳಗೆ ಹುಲಿಯ ಹೃದಯವಿದೆ. ನಾವು ತಂದಿರತಕ್ಕ ಈ ನಿಲುವಳಿಯನ್ನು ನೋಡಿದರೆ ನಿಮಗೆ ಯಾರ ಬಗ್ಗೆ ಅನುಕಂಪ ಇದೆ, ಸಹಾನುಭೂತಿ ಇದೆ ಎಂಬುದು ಇಲ್ಲೇ ಗೊತ್ತಾಗುತ್ತಿದೆ. ಅಂಗೈ ಹುಣ್ಣಿಗೆ ಕನ್ನಡಿ ಬೇಕೆ? ಮಾನ್ಯ ಅಧ್ಯಕ್ಷರೆ, ನಾನು ಕೊನೆಯದಾಗಿ ಕೇಳಿಕೊಳ್ಳುವುದೇನೆಂದರೆ ಈ ದಿವಸ ಸದನದ ಮುಂದೆ ಮಾನ್ಯ ಸದಸ್ಯರು ತಂದಿರತಕ್ಕ ನಿಲುವಳಿಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ.ಎಂ. ಇಬ್ರಾಹಿಂ (ಶಿವಾಜಿನಗರ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ನನ್ನ ಮಿತ್ರರಾದ ಶ್ರೀಮಾನ್ ಗಂಗಾಧರನ್‌ರವರು ತಂದಿರತಕ್ಕ ನಿರ್ಣಯವನ್ನು ಎದುರುಗಡೆಯಲ್ಲಿ ಕುಳಿತಿರತಕ್ಕ ಮಾನ್ಯ ಮಿತ್ರರುಗಳು ಏತಕ್ಕಾದರೂ ವಿರೋಧ ಮಾಡುತ್ತಿದ್ದಾರೋ ನನಗಂತೂ ಗೊತ್ತಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಶೀರ್ನಳ್ಳಿ ಚಂದ್ರಶೇಖರ್‌ರವರು ಹೇಳಿದಂತೆ ನನಗೂ ಕೂಡ ಈ ಸಂದರ್ಭದಲ್ಲಿ ಒಂದು ಕತೆ ಜ್ಞಾಪಕಕ್ಕೆ ಬರುತ್ತದೆ. ಏನೆಂದರೆ, ಒಂದು ಊರಿಗೆ ಒಬ್ಬರು ಸ್ವಾಮಿಗಳು ಬಂದು ಜನಗಳನ್ನು ಕುರಿತು ಭಾಷಣ ಮಾಡುತ್ತಾ, ಹಿಂದೆ ಜನಗಳು ಬಹಳ ಸೌಮ್ಯ ಆಹಾರವನ್ನು ತಿನ್ನುತ್ತಿದ್ದರು, ಆದರೆ ರಾಗಿ ರೊಟ್ಟಿ, ಚಟ್ನಿ ಮುಂತಾದುವನ್ನು ತಿನ್ನುತ್ತಿದ್ದರು, ಅವರು ಹಾಗಿದ್ದರು ಹೀಗಿದ್ದರು ಎಂದು ಭಾಷಣ ಮಾಡಿದರು. ಅವರು ಇನ್ನೇನು ಅಲ್ಲಿಂದ ಹೊರಡಬೇಕು ಎನ್ನುವಾಗ ಈ ಸ್ವಾಮಿಗಳ ಭಾಷಣವನ್ನು ಕೇಳಿದ್ದ ಒಬ್ಬ ಬಡವ ಹೊರಗಡೆ ಕಾದಿದ್ದವನು ಈ ಸ್ವಾಮಿಗಳ ಕಾಲಿಗೆ ನಮಸ್ಕಾರ ಮಾಡಿ ಸ್ವಾಮಿ, ಈ ದಿವಸ ಸಾಯಂಕಾಲ ನಮ್ಮ ಮನೆಗೆ ಊಟಕ್ಕೆ ಬರಬೇಕೆಂದು ಕೇಳಿಕೊಂಡ. ಆಗ ಸ್ವಾಮಿಯವರು ಆಗಲಿ, ಊಟಕ್ಕೆ ಏನು ಮಾಡಿಸುತ್ತೀಯಾ? ಎಂದು ಕೇಳಿದರು. ಆಗ ಆ ಬಡವ ಸ್ವಾಮಿ, ನಾವು ಭಾಷಣ ಮಾಡುವಾಗ ಹೇಳಿದಂತೆಯೇ ರಾಗಿ ರೊಟ್ಟಿ, ಚಟ್ನಿ. ಮಾಡಿಸುತ್ತೇನೆ ಎಂದು ಹೇಳಿದ, ಆದಕ್ಕೆ ಸ್ವಾಮಿಗಳು ಸಕ್ಕ ಅಯ್ಯೋ ಮನುಷ್ಯ ಈ ರೊಟ್ಟಿ, ಚಟ್ನಿ ತಿನ್ನುವವರು ಶ್ರೀಮಂತರು, ದೊಡ್ಡವರು, ಅದನ್ನು ನಾವು ತಿನ್ನುವುದಿಲ್ಲ, ನಮಗೆ ಕೋಳಿ ತಂದು ಬೇಯಿಸಿ ಅಡಿಗೆ ಮಾಡಿಸು ಎಂದು ಹೇಳಿದರಂತೆ, ಹಾಗೆ ನೀವು ಬರೀ ಬಾಯಲ್ಲಿ ಹೇಳುತ್ತೀರಿ ಅಷ್ಟೆ. ಹಿಂದೆ ನೀವು ಇದೇರೀತಿ ಒಂದು ಕಾನೂನು ಮಾಡಿ ಕೊಟ್ಟವರಿಗೆ ಕೊಡಬೇಡಿ ಎಂದು ಮಾಡಿದಿರಿ, ಇವತ್ತು ಅವರ ಗತಿ ಏನಾಗಿದೆ. ಎಂಬುದನ್ನು ನೋಡಿದ್ದೀರಾ? ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ಕೆಇಟ್ಟ ಮಾತಿಗೆ ತಪ್ಪಲಾರದೆ ಸಾಲ ತೀರಿಸುವುದಕ್ಕೋಸ್ಕರ ಸತ್ಯ ಹರಿಶ್ಚಂದ್ರ ತನ್ನ ಹೆಂಡತಿಯನ್ನೇ ಮಾರಿದ, ಅಂಥ ಈ ದೇಶದಲ್ಲಿ ಸಾಲ ಕೊಟ್ಟವರಿಗೆ ವಾಪಸ್ಸು ಕೊಡಬೇಡಿ ಎಂದು ಕಾನೂನು ತಂದಿದ್ದು

ಸರಿಯೇ? ನೀವು ಬೇರೆಯವರ ಬುಟ್ಟಿಗೆ ಕೈ ಹಾಕುತ್ತೀರಿ. ನಿಮ್ಮ ಬುಟ್ಟಿಗೆ ನಾವು ಕೈಹಾಕಿದರೆ ನಿಮಗೆ ಏಕೆ ಸ್ವಾಮಿ ಇಷ್ಟುಉರಿ. ಇವತ್ತು ೫ ಎಕರೆಯೊಳಗೆ ಜಮೀನು ಇರುವವರಿಗೆ, ೨೪೦೦ ರೂಪಾಯಿಗಿಂತ ಕಡಿಮೆ ವಾರ್ಷಿಕ ಆದಾಯವಿರುವವರಿಗೆ, ಅಲ್ಪಸಂಖ್ಯಾತರಿಗೆ, ದಲಿತವರ್ಗದವರಿಗೆ, ಶೋಷಣೆಗೆ ಒಳಗಾದವರಿಗೆ, ಬಡವರಿಗೆ, ಇನ್ನೂ ಮುಂತಾದವರಿಗೆ ಕೊಟ್ಟಿರತಕ್ಕ ಸಾಲವನ್ನು ಮನ್ನಾ ಮಾಡಿ ಎಂದರೆ ನಿಮ್ಮ ಎದೆ ಧಸಕ್ ಎನ್ನುತ್ತದೆ. ನಮ್ಮ ಕಡೆ ಒಂದು ಗಾದೆ ಹೇಳುತ್ತಾರೆ, ಏನೆಂದರೆ ಅತ್ತೆ ಆಸ್ತಿಯನ್ನು ಆಳಿಯ ದಾನ ಮಾಡಿದ, ಅಂತ. ಆದರಂತೆ ನಿಮ್ಮದು ಏನೂ ಹೋಗುವುದಿಲ್ಲ. ಮಾರ್ವಾಡಿಗಳ ತರಹ ಬಡ್ಡಿಗೆ ಬಡ್ಡಿ ಸೇರಿಸಿ ಸುಸ್ತಿ ಬಡ್ಡಿಯನ್ನು ಸರ್ಕಾರದವರು ವಸೂಲ್ಮಾಡುತ್ತಿದ್ದೀರಿ ಬಡವರ ಬಗ್ಗೆ ಕಾಳಜಿ ಇದ್ದರೆ, ಅವರ ಬಗ್ಗೆ ಚಿಂತೆ ಇದ್ದರೆ ನಿಮ್ಮ ಸಮಾಜವಾದದ ಸೋಗನ್ನು, ಈ ಬೂಟಾಟಿಕೆಯನ್ನು ಕಾಲ್ಲಿಂದ ಒದ್ದು ಹೊರಗೆ ಬನ್ನಿ. ಇಲ್ಲಿ ಶ್ರೀಮಂತರು ಯಾರು, ಬಡವರು ಯಾರು...

ಶ್ರೀ ಎಸ್. ಎಂ. ಶೀರ್ನಳ್ಳಿ - ಚಂದ್ರಶೇಖರ್.—ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ನನ್ನನ್ನು ಸುಟ್ಟುಬಿಡುವಂತೆ ನೋಡುತ್ತಿದ್ದಾರೆ, ಆದುದರಿಂದ ನನಗೆ ರಕ್ಷಣೆ ಬೇಕು.

(ಸಭೆಯಲ್ಲಿ ನಗು)

ಶ್ರೀ ಸಿ ಎಂ. ಇಬ್ರಾಹಿಂ.—ಮಾನ್ಯ ಸಭಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರಾದ ಶೀರ್ನಳ್ಳಿ ಚಂದ್ರಶೇಖರ್‌ರವರ ಮನೆಯ ಮುಂದೆ ನಾವು ಆಗಾಗ್ಗೆ ಹೋಗುತ್ತಿರುತ್ತೇವೆ, ಅವರು ಬಹಳ ಚೆನ್ನಾಗಿ ಮನೆಯನ್ನು ಕಟ್ಟಿಸಿಕೊಂಡಿದ್ದಾರೆ. ''ಒಳಗೆ ನಾಯಿಗಳಿವೆ ಎಚ್ಚರಿಕೆ'' ಎಂದು ಬಾಗಿಲಲ್ಲಿ ಬೋರ್ಡ್ ಹಾಕಿದ್ದಾರೆ. ನಾವು ಬಡವರು, ನಮ್ಮ ಮನೆಯಲ್ಲಿ ನಾಯಿಗಳಿಲ್ಲ, ಏಕೆಂದರೆ ನಮ್ಮ ಮನೆಯಲ್ಲಿ ಮನುಷ್ಯರಿಗೇ ಅನ್ನವಿಲ್ಲದಿರುವಾಗ ಆ ನಾಯಿಗಳಿಗೆ ಎಲ್ಲಿಂದ ಅನ್ನ ತಂದು ಹಾಕುವುದು. ಸ್ವಾಮಿ, ಇವತ್ತು ಬೀದರ್ ಜಿಲ್ಲೆಯಲ್ಲಿ ನೀವು ಕೊಟ್ಟಿರತಕ್ಕ ಬೀಜ ಏನಿದೆ ಅದು ಹೈಬ್ರಿಡ್ ಬೀಜ, ಅದು ನೋಡುವುದಕ್ಕೆ ಚೆನ್ನಾಗಿದೆ ಅಷ್ಟೆ. ಅದು ಹುಟ್ಟುವುದಿಲ್ಲ, ಬೇರೆಯವರ ಬೀಜ ತಂದು ಹಾಕಿ ಹುಟ್ಟಿಸಬೇಕು. ಇವತ್ತು ನೀವು ಒಬ್ಬರಿಗೆ ೨೦೦ ರೂಪಾಯಿ ಸಾಲ ಕೊಟ್ಟರೆ ನಾಳೆ ವರ್ಷ ಆಸಲು ಬಡ್ಡಿ ಸೇರಿಸಿ ೧೨೦೦ ರೂಪಾಯಿ ವಸೂಲ್ಮಾಡುತ್ತೀರಿ. ಅಂಥ ಮಾರ್ವಾಡಿಗಳಂಥ ಜನ ನೀವು. ಅದು ಏನಾದರೂ ಇರಲಿ, ಇವತ್ತು ಮಾನ್ಯ ಸದಸ್ಯರಾದ ಶ್ರೀಮಾನ್ ಗಂಗಾಧರನ್‌ರವರು ಸಭೆಯ ಮುಂದೆ ತಂದಿರತಕ್ಕ ತಿದ್ದುಪಡಿ ಏನಿದೆ ಇದು ನಿಜವಾಗಿಯೂ ಬಹಳ ಸೂಕ್ಷ್ಮವಾದದು. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದರೆ ಹಿಂದೆ ನೀವು ಹರಿಜನರಿಗೆ ಮನೆ ಕಟ್ಟುವಾಗ ಹೆಂಚುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಲ ಕೊಟ್ಟಿರಿ, ಕುರಿ ಸಾಕುವುದಕ್ಕೆ ಸಾಲ ಕೊಟ್ಟಿರಿ, ಕೋಳಿ ಸಾಕುವುದಕ್ಕೆ ಸಾಲ ಕೊಟ್ಟಿರಿ, ಹಂದಿ ಸಾಕುವುದಕ್ಕೆ ಸಾಲ ಕೊಟ್ಟಿರಿ, ಆ ಸಾಲವನ್ನು ರದ್ದು ಮಾಡಿ, ಅವರು ಬಡವರು, ನೀವು ಬಡವರ ಪ್ರತಿನಿಧಿಗಳಾದ್ದರಿಂದ ಆದರ್ಶಪುರುಷರಾಗಿ ಬಾಳಿ ಎಂದು ಹೇಳುತ್ತಿದ್ದೇವೆ. ಸ್ವಾಮಿ, ಈ ಸಂದರ್ಭದಲ್ಲಿ ಒಂದು ಮಾತು ಹೇಳುವುದಾದರೆ, ನೀವು ಒಬ್ಬ ಹರಿಜನರಿಗೆ ಕೋಳಿ ಸಾಕುವುದಕ್ಕೆ ೩೦೦–೪೦೦ ರೂಪಾಯಿ ಸಾಲ ಕೊಡುತ್ತೇವೆಂದು ಹೇಳುತ್ತೀರಿ ಆ ಬಡವ ಬಿ.ಡಿ.ಒ. ಆಫೀಸ್, ತಹಸೀಲ್ದಾರ್ ಆಫೀಸ್ ಎಂದು ಸುತ್ತಾಡಿ ಸೊರಗಿ ಬರುವ ಹೊತ್ತಿಗೆ ಅವರೆಲ್ಲಾ ತಿಂದು ಕೊನೆಗೆ ಇವನ ಕೈಗೆ ಸಿಕ್ಕುವುದು ನೂರೋ ನೂರೈವತ್ತೋ ರೂಪಾಯಿಗಳು. ಆ ದುಡ್ಡಿನಲ್ಲಿ ಅವನು ಕೋಳಿ ಸಾಕುವುದಕ್ಕೆ ಆಗದೆ, ಸಂತೆಯಲ್ಲಿ ಒಂದೆರಡು ಕೋಳಿ ತಂದು ಬೇಯಿಸಿಕೊಂಡು ತಿಂದುಹಾಕುತ್ತಾನೆ. ಅಷ್ಟು ಹೊತ್ತಿಗೆ ನೀವು ಕೊಟ್ಟ ಸಾಲದ ಮೊದಲನೇ ಕಂತನ್ನು ಕಟ್ಟುವ ಸಮಯ ಬರುತ್ತದೆ. ಅಂದರೆ ನೀವು ಕೋಳಿ ಸಾಕುವುದಕ್ಕೆ ಕೊಡತಕ್ಕ ಸಾಲದಿಂದಾಗುವ ಪ್ರಯೋಜನ ಇಷ್ಟೇ.

ಸ್ವಾಮಿ, ಇನ್ನು ಬಾವಿ ತೆಗೆಸುವುದಕ್ಕೆ ಕೊಟ್ಟಿರುವ ಸಾಲದ ಬಗ್ಗೆ ಹೇಳುವುದಾದರೆ, ಅದು ಒಂದು ದೊಡ್ಡ ಚರಿತ್ರೆಯೇ ಆಗುತ್ತದೆ. ಬಾವಿಗಾಗಿ ಸಾಲ ತೆಗೆದುಕೊಂಡ ಸಣ್ಣಪುಟ್ಟ ರೈತರನ್ನು ಹಿಂಸಿಸುತ್ತೀರೇ ಹೊರತು ದೊಡ್ಡ ದೊಡ್ಡ ಕುಳಗಳನ್ನು ಕೇಳುವುದಕ್ಕೆ ಹೋಗುವುದಿಲ್ಲ. ೫೦–೬೦ ಸಾವಿರ ರೂಪಾಯಿ ಸಾಲ ಕೊಡಬೇಕಾದವರೂ ಇದ್ದಾರೆ. ಅವರನ್ನು ಬೇಕಾದರೆ ಕೆಂಪೇಗೌಡ ರಸ್ತೆಯಲ್ಲಿ ನೇಣುಹಾಕಿ ವಸೂಲ್ಮಾಡಿ, ಬೇಡ ಎಂದು ನಾವು ಹೇಳುವುದಿಲ್ಲ. ಆದರೆ ಅವರನ್ನು ನೀವು ಕೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನೀವು ಅಧಿಕಾರದಲ್ಲಿರುವುದರಿಂದ, ನಿಮ್ಮಿಂದ ರಕ್ಷಣೆ ಪಡೆಯಬಹುದೆಂದು ಅವರೆಲ್ಲಾ ನಿಮ್ಮ ಕಡೆಯಲ್ಲೇ ಬಂದು ಸೇರಿಕೊಂಡಿದ್ದಾರೆ. ನಮ್ಮ ಕಡೆ ಅವರ್ಯಾರೂ ಬರುವುದಿಲ್ಲ, ಕಾರಣ ನಮ್ಮಲ್ಲಿ ಅಧಿಕಾರವಿಲ್ಲ.

ಮಾನ್ಯ ಅಧ್ಯಕ್ಷಿಣಿಯವರೆ, ಕೊನೆಯದಾಗಿ ಒಂದು ಮಾತು ಹೇಳವುದಾದರೆ, ೫ ಎಕರೆಗಿಂತ ಕಡಿಮೆ ಜಮೀನು ಇರುವವರಿಗೆ, ಮತ್ತು ವಾರ್ಷಿಕ ಆದಾಯ ೨೪೦೦ ರೂ.ಗಿಂತ ಕಡಿಮೆ ಇರುವವರಿಗೆ ಅವರು ತೆಗೆದುಕೊಂಡಿರತಕ್ಕ ಸಾಲವನ್ನು ರದ್ದುಮಾಡಬೇಕೆಂಬ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಗಂಗಾಧರನ್‌ರವರು ಏನು ನಿರ್ಣಯವನ್ನು ಸಭೆಯಮುಂದೆ ತಂದಿದ್ದಾರೆ ಅದನ್ನು ಸಭೆ ಒಪ್ಪಿಕೊಳ್ಳ ಬೇಕೆಂದು ವಿನಂತಿ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷಿಣಿ ಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ.ವಿ. ಚಂದ್ರೇಗೌಡ (ಚಿಕ್ಕಮಗಳೂರು). —ಸನ್ಮಾನ್ಯ ಅಧ್ಯಕ್ಷಿಣಿಯವರೆ, ಈ ದಿವಸ ಮಾನ್ಯ ಸದಸ್ಯರಾದ ಶ್ರೀಮಾನ್ ಗಂಗಾಧರನ್‌ರವರು ಏನೊಂದು ತಿದ್ದುಪಡಿಯನ್ನು ಸದನದ ಮುಂದೆ ತಂದಿದ್ದಾರೆ, ಇದು ನಿಜವಾಗಿಯೂ ಶೋಚನೀಯವಾದುದು ಸರ್ಕಾರಿ ಹಾಕಿಕೊಂಡಿರತಕ್ಕ ಉತ್ತಮ ಆರ್ಥಿಕ ನೀತಿಯನ್ನು ಏನಾದರೂ ಮಾಡಿ ಬುಡವೇಲು ಮಾಡಬೇಕೆಂಬ ದೃಷ್ಟಿಯಿಂದ ಈ ತಿದ್ದುಪಡಿ ಯನ್ನು ಇಲ್ಲಿ ತರಲಾಗಿದೆ ಎಂದು ಹೇಳಬಯಸುತ್ತೇನೆ.

ಹಿಂದೆ ಸರ್ಕಾರದವರು ಡೆಟ್ ರಿಲೀಫ್ ಆಕ್ಟನ್ನು ತಂದರು. ಇದರಿಂದ ಬಹುಭಾಗ ಜನರಿಗೆ ಅನುಕೂಲವಾಯಿತು. ನೊಂದ ಜನರಿಗೆ ಅನುಕೂಲ ಮಾಡುವುದಕ್ಕೆ ಮತ್ತು ಅವರ ಬೆಂಬಲ ಪಡೆಯು ವುದಕ್ಕೆ ನಮ್ಮ ಸರ್ಕಾರ ಅನೇಕ ಕೆಲಸ ಕಾರ್ಯಗಳನ್ನು ಮಾಡಿದೆ. ಹೀಗಿರುವಾಗ, ಸರ್ಕಾರದವರು ಕೊಟ್ಟ ಸಾಲಗಳನ್ನು, ಅಥವಾ ಬ್ಯಾಂಕ್‌ನವರು ಇವರಿಗೆ ಕೊಟ್ಟಸಾಲಗಳನ್ನು, ಮತ್ತು ಸೊಸೈಟಿ ಯವರು ಕೊಟ್ಟ ಸಾಲಗಳನ್ನು ಮನ್ನ ಮಾಡಿ ಎಂದು ಹೇಳುವುದಾದರೆ, ನಮ್ಮ ಆರ್ಥಿಕ ಸಚಿವರ ಕಾರ್ಯಕ್ರಮಗಳ ಗತಿ ಏನಾಗಬೇಕು, ಎಂದು ಮಾನ್ಯ ಶಾಸಕರು ಯೋಚನೆ ಮಾಡಲಿಲ್ಲವೇನೋ ಎಂದು ನಾನು ಹೇಳುತ್ತೇನೆ. ಮಾನ್ಯ ಶೀರನಾಳಿ ಚಂದ್ರಶೇಖರ್ ಅವರು, ಒಂದು ಕಣ್ಣು ಹೋದರೆ ಎರಡು ಕಣ್ಣುಗಳೂ ಹೋಗಲೀ ಎನ್ನುವ ಒಂದು ಉದಾಹರಣೆಯನ್ನು ಹೇಳಿದರು. ಅವರು ಹೇಳಿದಂತೆ ಇದು ಸರಿಯಿಲ್ಲ. ಇದರಿಂದ ಕೆಲವು ಜನರಿಗೆ ತೊಂದರೆಯಾಗಿದೆ. ಆ ನೋವನ್ನು ತಡೆಯಲಾರದೆ, ದುರ್ಬಲ ವರ್ಗದವರಿಗೆ ಅನುಕೂಲ ಮಾಡಬೇಕೆನ್ನುವ ನೆಪದಲ್ಲಿ, ಅವರ ಬೆಂಬಲ ಪಡೆಯಬೇಕು ಎನ್ನುವ ಒಂದು ಉದ್ದೇಶವನ್ನಿಟ್ಟುಕೊಂಡು ಇದನ್ನು ತಂದಿದ್ದರೆ, ಅವರ ಬೆಂಬಲ ಪಡೆಯುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಯಾವತ್ತು ನಮ್ಮ ಸರ್ಕಾರದವರು ದುರ್ಬಲ ವರ್ಗದವರ ಏಳಿಗಾಗಿ, ಅವರ ಜೀವನವನ್ನು ಉತ್ತಮ ಪಡಿಸುವುದಕ್ಕೋಸ್ಕರವಾಗಿ ಸಣ್ಣ ರೈತಾಪಿ ಜನಗಳ ಆರ್ಥಿಕ ಮಟ್ಟವನ್ನು ಉತ್ತಮ ಪಡಿಸುವುದಕ್ಕೋಸ್ಕರವಾಗಿ ಬೇಕಾದಷ್ಟು ಸ್ಕೀಂಗಳನ್ನು ಹಾಕಿಕೊಂಡಿದ್ದಾರೆ. ಸೊಸೈಟಿಗಳ ಮುಖಾಂತರ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳ ಮುಖಾಂತರ, ನ್ಯಾಷನಲೈಸ್ಡ್ ಬ್ಯಾಂಕ್‌ಗಳ ಮುಖಾಂತರ ನಾಲ್ಕು ಪರ್ಸೆಂಟ್ ಬಡ್ಡಿ ದರದಲ್ಲಿ ಉಪಕಸುಬುಗಳನ್ನು ಪ್ರಾರಂಭ ಮಾಡಲಿಕ್ಕೆ ಸಾಲ ಕೊಡ ತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಿದ್ದಾರೆ. ಅಲ್ಲದೆ, ಸಿ. ಎಲ್. ಡಿ. ಸಾಲ ಎಂದು ಆರ್ಜಿ ಹಾಕಿದ ೧೫ ದಿವಸದಲ್ಲಿಯೇ ಸಾಲ ಸಿಕ್ಕುವ ವ್ಯವಸ್ಥೆಯನ್ನೂ ಕೂಡ ಮಾಡಿದ್ದಾರೆ. ಆದ್ದರಿಂದ ಈ ರೈತರಿಗೆ ನಾನಾ ರೀತಿಯಲ್ಲಿ ಸುಲಭ ಬಡ್ಡಿ ದರದಲ್ಲಿ ಸಾಲ ಬೇಕಾದಷ್ಟು ದೊರೆಯುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳೂ ಸಹ ರೈತನು ತನ್ನ ಆರ್ಥಿಕ ಮಟ್ಟವನ್ನು ಉತ್ತಮ ಪಡಿಸುವುದಕ್ಕೋಸ್ಕರ ದಿಟ್ಟ ಹೆಜ್ಜೆಗಳಾಗಿವೆ ಎಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಎಲ್ಲಾ ಕಾರ್ಯಕ್ರಮಗಳನ್ನೂ ಮಾನ್ಯ ಸದಸ್ಯರು ಬುಡ ಮೇಲು ಮಾಡುವುದಕ್ಕೆ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದು ತುಂಬಾ ಶೋಚನೀಯವಾದ ವಿಚಾರವಾಗಿದೆ. ಇದರಲ್ಲಿ ರಾಜಕೀಯ ಅಭಿಪ್ರಾಯವನ್ನು ಇಟ್ಟುಕೊಳ್ಳದೆ ದುರ್ಬಲ ವರ್ಗದವರ ಬೆಂಬಲವನ್ನು ಇದರಿಂದ ಪಡೆಯುತ್ತೇವೆನ್ನುವ ಉದ್ದೇಶವನ್ನು ಇಟ್ಟುಕೊಳ್ಳದೆ ತಾವು ತಂದಿರತಕ್ಕ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಸರ್ಕಾರದವರು ಈ ದಿಸೆಯಲ್ಲಿ ಹೆಚ್ಚಿನ ಕಾರ್ಯಗಳನ್ನು ಮಾಡುತ್ತಿದ್ದಾರೆ. ದುರ್ಬಲ ವರ್ಗದವರ ಏಳಿಗೆಗಾಗಿಯೇ ಸರ್ಕಾರದವರು ದುಡಿಯುತ್ತಿದ್ದಾರೆ. ಮಾನ್ಯ ಸದಸ್ಯರು ಇಂಥ ಒಂದು ನಿರ್ಣಯ ವನ್ನು ತರದೆ, ಇದರ ಬಗ್ಗೆ ಒಳ್ಳೆಯ ಸಲಹೆಗಳನ್ನು ಕೊಡಬಹುದಿತ್ತು. ಇವರಿಗೆ ಹೆಚ್ಚಿನ ಕಂತುಗಳಲ್ಲಿ ಸಾಲ ಸಿಕ್ಕುವಂತಹ ವ್ಯವಸ್ಥೆ ಮಾಡುವ ಬಗ್ಗೆ, ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಕ್ಕುವ ವ್ಯವಸ್ಥೆ ಮಾಡುವ ಬಗ್ಗೆ ಇನ್ನೂ ಅನೇಕ ರೀತಿಯಲ್ಲಿ ಒಳ್ಳೆಯ ಸಲಹೆಗಳನ್ನು ತಾವುಗಳು ಕೊಡಬಹುದಿತ್ತು. ಇದಾವು ದನ್ನೂ ಕೊಡದೆ, ಕೊಟ್ಟ ಸಾಲವನ್ನು ಪೂರ್ತಿಯಾಗಿ ಮಜ ಮಾಡಿ ಎಂದು ಹೇಳಿದರೆ. ಅದು ಏನು ಎಂದು ಸನಗರ್ಥವಾಗುವುದಿಲ್ಲ. ನಾನು ಕೋ-ಆಪರೇಟೀವ್ ಅಮೆಂಡ್‌ಮೆಂಟ್‌ನ ಬಗ್ಗೆ ಮಾತನಾಡುವಾಗ

ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ. ಪರಿಜನ ಗಿರಿಜನರ ಮತ್ತು ಹಿಂದುಳಿದ ವರ್ಗಗಳು ಬೇನಾಮಿ ಸಾಲ ಏನು ಮಾಡಿದ್ದಾರೆ, ಅದನ್ನು ಸುಮಾರು ೫೦೦ ರೂಪಾಯಿಗಳವರೆಗೆ ಇದ್ದರೆ ಮನ್ನಾ ಮಾಡ ಬೇಕು ಎನ್ನುವ ಒಂದು ಸಲಹೆಯನ್ನು ನಾನು ಕೊಟ್ಟಿದ್ದೇನೆ. ಅದಕ್ಕೆ ಮಾನ್ಯ ಮಂತ್ರಿಗಳು ಇದು ಒಳ್ಳೆಯ ಸಲಹೆ, ಇದನ್ನು ಪರಿಶೀಲನೆ ಮಾಡುತ್ತೇನೆ ಎಂದು ಉತ್ತರವನ್ನೂ ಕೊಟ್ಟಿದ್ದಾರೆ. ಈ ರೀತಿ ಯಾಗಿ ತಾವು ಒಳ್ಳೆಯ ಸಲಹೆಗಳನ್ನು ಕೊಡಿ, ಇದನ್ನು ಬಿಟ್ಟು ಕೊಟ್ಟ ಸಾಲವೆಲ್ಲವನ್ನೂ ಮನ್ನಾ ಮಾಡಿ ಎಂದು ಹೇಳಿದರೆ, ದೇಶದ ಆರ್ಥಿಕ ಸ್ಥಿತಿ ಏನಾಗಬೇಕು ? ಆರ್ಥಿಕವಾಗಿ ಎಷ್ಟರಮಟ್ಟಿಗೆ ಕೆಳಗೆ ಹೋಗು ತ್ತದೆ ಏನ್ನುವುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕಾಗಿತ್ತು. ಸಮ್ಮಿ ಸರ್ಕಾರದವರು ಉತ್ತಮ ಕಾರ್ಯಕ್ರಮಗಳನ್ನು ಈ ದಿಸೆಯಲ್ಲಿ ಹಾಕಿಕೊಂಡಿದ್ದಾರೆ, ಅವುಗಳನ್ನು ತಾವು ಬುಡಮೇಲು ಮಾಡುವುದಕ್ಕೆ ಈ ನಿರ್ಣಯವನ್ನು ತಂದಿದ್ದೀರಿ ಎಂದು ಅರ್ಥವಾಗುತ್ತದೆ, ಆದ್ದರಿಂದ ಇದನ್ನು ತಾವು ದಯವಿಟ್ಟು ವಾಪಸ್ ತೆಗೆದುಕೊಳ್ಳಬೇಕು ಎಂದು ಹೇಳಿ, ನನ್ನ ಎರಡು ಮಾತುಗಳನ್ನು ಮುಗಿ ಸುತ್ತೇನೆ.

† ಶ್ರೀ ಕೆ. ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ).—ಮಾನ್ಯ ಅಧ್ಯಕ್ಷಣೀಯವರೇ, ಮಾನ್ಯ ಸ್ನೇಹಿತರಾದ ಗಂಗಾಧರ್ ಅವರು ತಂದಿರತಕ್ಕಂಥ ನಿರ್ಣಯವನ್ನು ನಾನು ಸಂಪೂರ್ಣವಾಗಿ ಸ್ವಾಗತಿಸು ತ್ತೇನೆ. ಮತ್ತು ಇದಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತೇನೆ. ಇದನ್ನು ಆಡಳಿತ ಪಕ್ಷದವರು ಬಹಳ ಸಂತೋಷದಿಂದ ಸ್ವಾಗತಿಸಬೇಕಾಗಿತ್ತು. ಮಾನ್ಯ ಸದಸ್ಯರಾದ ತೇಲ್ಕರ್ ಅವರು ಮಾತನಾಡುತ್ತಾ, ವೀಕರ್ ಸೆಕ್ಷನ್ಸ್ ಏನ್ನತಕ್ಕದ್ದನ್ನು ಡಿಫೈನ್ ಮಾಡಿಲ್ಲ ಎನ್ನುವ ಅಂಶವನ್ನು ಪ್ರಸ್ತಾಪ ಮಾಡಿದ್ದಾರೆ. ಇದನ್ನು ಕಾನೂನಿಲ್ಲಿಯೇ ಡಿಫೈನ್ ಮಾಡಲಾಗಿದೆ. ಯಾರು ೨೪೦೦ ರೂಪಾಯಿಗಳ ಇನ್‌ಕಂಗಿಂತ ಕಡಿಮೆ ವರಮಾನವನ್ನು ಹೊಂದಿದ್ದಾರೆಯೋ, ಮತ್ತು ಐದು ಎಕರೆಗಿಂತ ಕಡಿಮೆ ಖುಷ್ಕಿ ಜಮೀನು ಹೊಂದಿ ದ್ದಾರೆಯೋ ಅವರು ವೀಕರ್ ಸೆಕ್ಷನ್ಸ್ ಎಂದು ಡಿಫೈನ್ ಮಾಡಲಾಗಿದೆ ಅದನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮುಂದುವರಿದು ಅವರು, ಸರ್ಕಾರದವರು ಇಷ್ಟರಿಗೆ ಕೊಟ್ಟಿರತಕ್ಕ ಸಾಲಗಳನ್ನು ಅಂದರೆ, ಬ್ಯಾಂಕಿನ ಸಾಲಗಳನ್ನು, ಸಹಕಾರ ಸಂಘಗಳು ಕೊಟ್ಟಿರತಕ್ಕ ಸಾಲ ಗಳನ್ನು ವಜಾ ಮಾಡಿದರೆ ಸರ್ಕಾರದವರು ಸುಮಾರು ಐದು ಕೋಟಿ ರೂಪಾಯಿಗಳನ್ನು ತುಂಬಿ ಕೊಡ ಬೇಕಾಗುತ್ತದೆ ಎಂದು ಹೇಳಿದರು. ನಾನು ಹೇಳುತ್ತೇನೆ, ಆದು ೧೦–೧೫ ಕೋಟಿ ರೂಪಾಯಿಗಳ ವರೆಗೂ ಆಗಬಹುದು. ಮಾನ್ಯ ತೇಲ್ಕರ್ ಅವರು ಬ್ಯಾಂಕ್‌ನವರು, ಸೊಸೈಟಿಯವರು, ಪರಿಜನರಿಗೆ ಯಾರಿಗೆ ೨೪೦೦ ರೂಪಾಯಿಗಳ ಕೆಳಗೆ ಇನ್‌ಕಂ ಇದೆ, ಅವರಿಗೆ ಸಾಲವನ್ನು ಕೊಟ್ಟಿಲ್ಲ ಏನ್ನುವ ಮಾತನ್ನು ಹೇಳಿದ್ದಾರೆ. ಆದ್ದರಿಂದ ಈ ನಿರ್ಣಯದ ಅವಶ್ಯಕತೆ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಆದ್ದ ರಿಂದ ಈ ನಿರ್ಣಯದ ಅವಶ್ಯಕತೆ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಹೇಳುತ್ತೇನೆ, ಈ ಜನರಿಗೆ, ಸೊಸೈಟಿಯವರು ಮತ್ತು ಬ್ಯಾಂಕಿನವರು ಸಾಲಗಳನ್ನು ಕೊಟ್ಟಿದ್ದಾರೆ, ಅನೇಕ ವಿಧವಾದ ಅನೇಕರು ಸಾಲಗಳನ್ನು ಕೊಟ್ಟಿದ್ದಾರೆ.

ಇವತ್ತು ಈ ಒಂದು ಋಣ ಪರಿಹಾರ ಕಾಯಿದೆಯಿಂದ ಬಹಳ ಮಟ್ಟಿಗೆ ಅನೇಕ ಜನಗಳಿಗೆ ಪರಿಹಾರ ಸಿಕ್ಕಿದೆ, ರಕ್ಷಣೆ ದೊರೆದಿದೆ. ನಾವು ಅಲ್ಲಲ್ಲಿ ಬೋರ್ಡ್‌ಗಳನ್ನು ನೋಡುತ್ತಿದ್ದೇವೆ ಮತ್ತು ಕೇಳಿದ್ದೇವೆ, ಈ ಬಾಬಿಗೆ ಕರ್ನಾಟಕ ರಾಜ್ಯದಿಂದ ೧೩೦ ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ ಎಂದು, ಆದು ಬಹಳ ಸಂತೋಷವಾದ ವಿಚಾರ. ಇಂಥ ಕಾಯಿದೆಯನ್ನು ಯಾರೂ ವಿರೋಧ ಮಾಡುವುದಿಲ್ಲ. ಇನ್ನು ವೀಕರ್ ಸೆಕ್ಷನ್ಸ್ ಎಂದು ದುರ್ಬಲ ಜನಾಂಗ ಎಂದು ಏನು ಇದೆಯೋ ಅದು ಸಾಮಾನ್ಯವಾಗಿ ಜನತೆ ಯಿಂದ ಸಾಲ ಪಡೆದಿರುವುದಿಲ್ಲ, ಸಹಕಾರ ಸಂಘಗಳಿಂದಲೋ, ಸರ್ಕಾರದಿಂದಲೋ ಅಥವಾ ಬ್ಯಾಂಕು ಗಳಿಂದಲೋ ಸಾಲವನ್ನು ಪಡೆದಿರುತ್ತದೆ. ಈ ಒಂದು ಜನತೆಯ ಮನಸ್ಸಿಗೆ ಸಮಾಧಾನವಾಗಬೇಕಾದರೆ ಸರ್ಕಾರದಿಂದ, ಬ್ಯಾಂಕುಗಳಿಂದ ಮತ್ತು ಸಹಕಾರ ಸಂಘಗಳಿಂದ ಪಡೆದಿರತಕ್ಕ ಸಾಲದಿಂದ ವಿಮುಕ್ತ ರನ್ನಾಗಿ ಮಾಡಬೇಕಾಗುತ್ತದೆ. ಹೀಗೆ ಈ ಒಂದು ಋಣದಿಂದ ಆತನನ್ನು ದೂರ ಮಾಡಿದರೆ ತಾನು ತನ್ನ ಸಂಸಾರವನ್ನು ಮತ್ತು ತನ್ನ ಪೃತ್ತಿಯನ್ನು ಬಹಳ ಸಂತೋಷದಿಂದ ಮಾಡುವುದಕ್ಕೆ ಅನುಕೂಲವಾಗು ತ್ತದೆ. ಈ ದೃಷ್ಟಿಯಿಂದ ಮಾನ್ಯ ಮಿತ್ರರಾದ ಗಂಗಾಧರನ್‌ರವರು ಏನು ಒಂದು ನಿರ್ಣಯವನ್ನು ತೆಗೆದು ಕೊಂಡು ಬಂದಿದ್ದಾರೆ ಆದನ್ನು ನಾನು ಸ್ವಾಗತ ಮಾಡುತ್ತೇನೆ. ಇದನ್ನು ಟ್ರೆಸರಿ ಬೆಂಚಿನವರು ಸ್ವಾಗತ ಮಾಡಬೇಕಿತ್ತು, ಆದರೆ ಅವರು ಅದನ್ನು ವಿರೋಧ ಮಾಡುತ್ತಿರುವುದು ಬಹಳ ಶೋಚನೀಯವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ, ಬಹುಶಃ ನಮ್ಮ ಜನತಾ ಸರ್ಕಾರ ಇರತಕ್ಕ ಉತ್ತರ ಪ್ರದೇಶ ಮತ್ತು

ಬಿಹಾರನಲ್ಲಿ ಕೂಡ ಸಣ್ಣ ರೈತರು ಮತ್ತು ದುರ್ಬಲ ವರ್ಗದವರೇನಿದ್ದಾರೆ ಅಂಥವರಿಗೆ ಸರ್ಕಾರ, ಬ್ಯಾಂಕುಗಳು ಮತ್ತು ಸಹಕಾರ ಸಂಘಗಳು ಕೊಟ್ಟಿರತಕ್ಕ ಸಾಲವನ್ನು ವಜಾ ಮಾಡಬೇಕೆಂಬ ತರಾವನ್ನು ತರುತ್ತಿದ್ದಾರೆಂದು ಕೇಳಿದ್ದೇನೆ. ಅದಕ್ಕೆ ಮೊದಲು ನಮ್ಮ ಕರ್ನಾಟಕ ಸರ್ಕಾರದವರು ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ಕಾನೂನನ್ನು ತಂದು ಇಲ್ಲಿನ ಜನತೆಯ ವಿಶ್ವಾಸಕ್ಕೆ ಪಾತ್ರರಾಗಬೇಕೆಂದು ಹೇಳುತ್ತೇನೆ ಇನ್ನೊಂದು ಸಮಸ್ಯೆ ಏನೆಂದರೆ ನೀವು ತಂದಿರತಕ್ಕ ರೂಲ್ ಪರಿಹಾರ ಕಾಯಿದೆ ಏನಿದೆ ಇದರಿಂದ ಬಹುಮಟ್ಟಿಗೆ ಸಣ್ಣ ಹಿಡುವಳಿದಾರರಿಗೆ ಬಹಳ ಅನಾನುಕೂಲವಾಗಿದೆ. ಈ ಕಾಯಿದೆಯಲ್ಲಿ, ಸಣ್ಣ ಹಿಡುವಳಿದಾರರಿಗೆ ಈ ಒಂದು ಕಾನೂನು ಅನ್ವಯಿಸುವುದಿಲ್ಲ ಮೆಂಬ ಅಂಶ ಇದ್ದಿದ್ದರೆ ಇದನ್ನು ಬಹುಮಟ್ಟಿಗೆ ಸ್ವಾಗತ ಮಾಡಬೇಕಿತ್ತು. ಇವತ್ತಿನ ದಿವಸ ಏನಾಗಿದೆ ಎಂದರೆ, ಹಳ್ಳಿಗಳಲ್ಲಿರತಕ್ಕ ಅನೇಕ ಜನ ಸಣ್ಣ ಹಿಡುವಳಿದಾರರು ಸಾಲವನ್ನು ಕೊಟ್ಟುಕೊಂಡಿದ್ದಾರೆ. ಹೀಗಿರುವಾಗ ಈ ಕಾನೂನಿನಿಂದ ಅವರಿಗೆ ಬಹಳ ತೊಂದರೆಯಾಗಿದೆ ಆದ್ದರಿಂದ ಇದಕ್ಕೆ ಒಂದು ಸೂಕ್ತ ತಿದ್ದುಪಡಿಯನ್ನು ತರಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ, ಇವತ್ತಿನದಿವಸ ಮಾನ್ಯ ಗಂಗಾಧರನ್‌ರವರು ಏನು ಒಂದು ನಿರ್ಣಯವನ್ನು ತಂದಿದ್ದಾರೆ ಅದನ್ನು ಸಂಪೂರ್ಣವಾಗಿ ಬೆಂಬಲಿಸುತ್ತಾ, ಸಣ್ಣ ಹಿಡುವಳಿದಾರರು, ದುರ್ಬಲ ವರ್ಗದವರು ಸರ್ಕಾರದಿಂದ, ಬ್ಯಾಂಕುಗಳಿಂದ ಮತ್ತು ಸಹಕಾರ ಸಂಘಗಳಿಂದ ತೆಗೆದುಕೊಂಡಿರತಕ್ಕ ಸಾಲವನ್ನು ವಜಾ ಮಾಡಬೇಕು ಮತ್ತು ಆ ಹಣವನ್ನು ರಾಜ್ಯ ಸರ್ಕಾರ ಭರ್ತಿ ಮಾಡಿ ಆ ಜನತೆಗೆ ಪರಿಹಾರವನ್ನು ದೊರಕಿಸಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷೀಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI V. M. KUSHNOOR (Minister of State for Co-operation).—Madam Chairman, the resolution brought by the hon. member Sri H. Gangadharan is going to affect not only the banking system of this country but at the same time the entire co-operative movement will be affected. First of all we must consider whether this House is competent to say that the loans given by the nationalised and scheduled banks will have to be wiped out and brought under the control of Debt Relief Act. The nationalised and schedule banks are governed under the Banking Regulation Act.

SRI Y. RAMAKRISHNA.—It is stated "recommends".

SRI V. M. KUSHNOOR.—Recommends means you have to accept. We will have to change clause 8 of the Debt Relief Act. We must consider whether this House can wipe out the loans advanced by the nationalised and scheduled banks. These banks are governed by the Banking Regulation Act which controls the banking sector of this country. This Act is passed by the Parliament. The State Government has no control. We have to request the Government of India. So, can we pass such a resolution here ?

Where from the moneys come to the nationalised and scheduled banks ? It is all depositors money. If we are going to pass this resolution to wipe out the debts, we want to wipe out the depositors money. Do you think the depositors will have any faith in this Government and banking systems who have put their hard earned money in the banks. We have no control on this kind of money. Not only that, If we pass this resolution even the co-operative

societies loans will have to be wiped out. Whose moneys the co-operative have ? It is all Reserve Bank's money, money from Agriculture Development Refinance Corporation, L.I.C. and depositers. Whatever money we are getting to the State from the Reserve Bank of India, accounting nearly 70 to 80 crores every year, nearly 28% is utilised for the small and marginal farmers. If we decide to wipe out the debt nearly Rs. 112 crores outstanding against the farmers will have to be wiped out. We have no control over the Reserve Bank. Therefore, I request the hon. members to bring this resolution in the Parliament if you are really anxious to wipe out this debt. We will also be benefitted by it. Parliament is the only competent body to pass such a resolution. The reserve Bank is giving money and even a single paise we cannot default. So, this being the discipline, you can ask the Parliament to pass such a resolution. You are in the majority in the Parliament and I think Congress (I) will not object to your bringing such kind of a resolution. If you want to serve the small farmers by bringing in such a resolution in the Parliament, I have no objection on that. But, today without having any authority I cannot give any guarantee.

SRI K. BHASKAR NAIDU.—The clock strikes six. Is the time extended ?

CHAIRMAN.—The time is extended.

SRI V. M. KUSHNOOR.—Even the long term loan amounting to Rs 56 crores has been given to 1,60,000 families and 27% of the entire loan we have advanced to Harijans. This is not a small amount. At the time of Demands I have also given figures.

Rs. 56 crores long-term loan which we have advanced is from the Agricultural Refinance Development Corporation, which is getting loan assistance from the World Bank. If we now say that we are going to abolish the debts, they will think twice whether they could advance to us. A portion of the money is also coming from the Government of India. If we pass such a resolution, nobody will come forward to give us money, and it will create lot of problems. This resolution is not going to solve the problems of small and marginal farmers. In the event of such a resolution, the Nationalised Banks and the any Scheduled Banks will certainly say that they are not going to finance money. Further the depositors will have no faith in the Banks. After say another 10 years you may bring in another resolution to wipe out all the debts. I am sure there will be confusion and chaos.

6-00 P. M.

The amounts outstanding against small farmers and weaker sections from 1972-73 onwards are as under :—

1972-73	...	Rs. 16.3 crores
1973-74	...	14.15 ,,
1974-75	...	18.66 ,,
1975-76	...	22.00 ,,
1976-77	...	25.26 ,,

The total will come to about Rs. 112 crores. It is not an ordinary amount. Whose money is this ? This amount is given to us by the Nationalised Banks, Agricultural Refinance Corporation, about 30-40 per cent by the Central Government, the Scheduled Banks and the State Government has also contributed. It is not one man's money. The amount given to us by the Life Insurance Corporation is also there. If we ask the Life Insurance Corporation of India that they have to wipe out the debt, certainly the L.I.C. will institute a suit against the Government. Therefore this is a very complicated matter, and it will not end by passing this resolution.

My hon friend Sri T. R. Shamanna has supported the Banking sector. He said that this is not a good resolution and it is not going to solve the problems of the small and marginal farmers.

Some hon. members argued about the rate of interest. I do not know whether the hon. members have lost faith in the co-operative movement. They can argue like that if they have lost faith in the co-operative movement. If the co-operative movement fails, there will be no other alternative to the small and marginal farmers to get any aid. We cannot condemn the co-operative movement by looking at some stray instances. There are 20,000 co-operative societies and about a thousand of them may not be working properly. Some hon. members said that we are collecting penal interest. Recently I announced the waiver of penal interest to the tune of Rs. 2.6 crores. If hon. members were to bring to my notice any reasonable cases, I will look into the matter. No individual can solve these problems. It is only the co-operative movement that can solve the problems of the small and marginal farmers.

SRI S. S. ARAKERI.—We have not condemned the co-operative movement as such ;

SRI V. M. KUSHNOOR.—Some hon. members said that we are charging interest like money lenders, and that co-operatives are the biggest exploiters. This is not correct. We cannot judge only by a few instances. It was stated that one person had borrowed Rs. 1,700/—, but he was charged Rs. 7,000/-as interest. If such

instances are brought to my notice, I will get the matter examined. At the same time, I am not saying that the entire co-operative movement is good : there may be some lapses. When there are only a few lapses, it is not correct to condemn the entire movement. The Resolution is not going to solve the problems of the weaker sections. I strongly oppose this Resolution. I request the hon. mover of the Resolution to withdraw it.

† **ಶ್ರೀ ಎಚ್.** ಗಂಗಾಧರನ್ (ಕೃಷ್ಣರಾಜ).—ಮಾನ್ಯ ಸಭಾಧ್ಯಕ್ಷಿಣಿಯವರೇ ಯಾರು ಈದೇಶದಲ್ಲಿ ಬಡತನದ ದವಡೆಯಲ್ಲಿ ಸಿಕ್ಕಿ ನರಳುತ್ತಿದ್ದಾರೋ, ಯಾರು ಈ ಸರ್ಕಾರದ, ಬ್ಯಾಂಕಿನ,ಸಹಕಾರ ಸಂಘಗಳ ಸಾಲದ ಶೂಲದಲ್ಲಿ ಸಿಕ್ಕಿ ಸಾಯುತ್ತಿದ್ದಾರೋ ಅಂಥ ಜನಕ್ಕೆ ಕಿಂಚಿತ್ ಸಹಾಯ ಮಾಡಬೇಕು ಎಂಬ ನಿರ್ಣಯವನ್ನು ಮಂಡಿಸಿದಾಗ ಮಾನ್ಯ ಸದಸ್ಯರುಗಳಾದ ವೆಂಕಟರಾಮಯ್ಯನವರು, ರಾಮಯ್ಯನವರು ಮತ್ತಿ ಕಟ್ಟೆಆವರು, ರೆಡ್ಡಿಯರು, ಪ್ರಭಾಕರ್ ತೇಲ್ಕರ್ ಆವರು, ಶೀರ್ನಾಳಿ ಚಂದ್ರಶೇಖರ್ ಆವರು ಚಂದ್ರೇಗೌಡ ಆವರು ಬಡವರಿಗೆ ಸಿಗುವಂಥ ಗಂಜಿಯು ಪಣ ಆವರಿಗೆ ಸಿಗಬಾರದು ಎಂದು ಈ ನಿರ್ಣಯವನ್ನು ವಿರೋಧಿಸುವಂಥಾದ್ದನ್ನು ನೋಡಿದಾಗ ನಾನು ಬಹಳ ಸಂಕಟಪಡಬೇಕಾಗುತ್ತದೆ. ಯಾತಕ್ಕೆ ಈ ರೈತರಿಗೆ ವಿರೋಧ ಮಾಡಿದರೋ ನನಗೆ ತಿಳಿಯದು. ಕೀರ್ತನೆ ಮಾಡುವವನಿಗೆ ಮೂಲ ಕಥೆ ಗೊತ್ತಿಲ್ಲದಿದ್ದರೆ ಅವನು ಉಪಕಥೆಗಳನ್ನು ಹೇಳಿ ಕಾಲ ತಳ್ಳುತ್ತಾನೆ. ಆ ರೀತಿ ಇವರು ನಿರ್ಣಯವನ್ನು. ನಿರ್ಣಯದ ಮೂಲ ಉದ್ದೇಶವನ್ನು ಅರ್ಥ ಮಾಡಿಕೊಳ್ಳದೇ ಮಾತನಾಡಿದರಲ್ಲಾ ಎಂದು ವ್ಯಥೆಯಾಗುತ್ತದೆ. ಮಾನ್ಯ ಮಂತ್ರಿಗಳು ಕಾನೂನನ್ನು ಸಮಗ್ರವಾಗಿ ಅಭ್ಯಾಸ ಮಾಡಿದ್ದರೆ ಕಾನೂನಿನ ಅನುಭವ ಆವರಿಗಿದ್ದರೆ, ಆವರು ಈ ನಿರ್ಣಯವನ್ನು ವಿರೋಧಿಸುತ್ತಿರಲಿಲ್ಲ ಎಂದು ಕಾಣುತ್ತದೆ. ಈ ನಿರ್ಣಯದ ಪ್ರಕಾರ ಎಂದಿನ ತಾರೀಖಿನವರೆಗೆ ಇರುವಂಥ ಸಾಲಗಳ ನಿವಾರಣೆಯಾಗುತ್ತದೆ ಎಂಬುದನ್ನು ಅಭ್ಯಾಸ ಮಾಡಿದ್ದರೆ ಕಾನೂನು ತಜ್ಞತೆ ಇದ್ದರೆ ಆವರು ಇದನ್ನು ವಿರೋಧಮಾಡುವ ಗೊಡವೆಗೆ ಹೋಗುತ್ತಾ ಇರಲಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಧೀರ್ಘವಾಗಿ ಹೇಳಿದರಂ. ಒಂದು ಸೊಸೈಟಿಯಲ್ಲಿ ೧೯೬೪ ರಲ್ಲಿ ೮೦೦ ರೂಪಾಯಿಗಳ ಸಾಲ ತೆಗೆದುಕೊಂಡು ೧೯೭೪ ರಲ್ಲಿ ೧೮,೦೦೦ ರೂಪಾಯಿಗಳನ್ನು ಕಟ್ಟಿದ್ದೇನೆ, ಆದರ ವಿವರಣೆ ಈಗ ಬೇಡ. ಬಳ್ಳಾರಿ ಜಿಲ್ಲೆಯಲ್ಲಿ ನಡೆದಂಥ ಒಂದು ಘಟನೆ ಪೇಪರಿನಲ್ಲಿ ಬಂದಿದೆ. ಎರಡು ವರ್ಷಗಳ ಹಿಂದೆ ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಘಟನೆಯನ್ನು ಕಂಡು ಸರ್ಕಾರದವರಿಗೆ ಮಾನವೀಯತೆ ಇದ್ದರೆ. ಎದೆಗಾರಿಕೆ ಇದ್ದರೆ ಕಣ್ಣೀರು ಕರೆಯಬೇಕಾಗಿದೆ. ಬಳ್ಳಾರಿ ಜಿಲ್ಲೆಯ ೩ ಎಕರೆ ಜಮೀನುಳ್ಳಂಥ ಒಬ್ಬ ಬಡ ರೈತ ಸರ್ಕಾರದಿಂದ ಕೇವಲ ಒಂದೂವರೆ ಸಾವಿರ ರೂಪಾಯಿಗಳನ್ನು ಸಾಲ ತೆಗೆದುಕೊಂಡು ಬಾವಿ ತೆಗೆದ ನೀರು ಬಾರದೆ ಆದು ಬಣಗಿಹೋಯಿತು. ಮನೆಯಲ್ಲಿದ್ದ ಪಾತ್ರೆ ಪದಾರ್ಥಗಳನ್ನು ಮಾರಿದ. ಕರ್ನಾಟದಲ್ಲಿ ನೌಕರಿ ಸಿಕ್ಕದೆ ತನ್ನ ಹೆಂಡತಿಯನ್ನು, ಎರಡು ಮಕ್ಕಳನ್ನು ಕರೆದುಕೊಂಡು ಅಂಧ್ರಪ್ರದೇಶಕ್ಕೆ ಹೋದ. ಗುಂಟೂರಿಗೆ ಹೋಗುವುದರೊಳಗೆ ಅವನಲ್ಲಿದ್ದ ಹಣವೆಲ್ಲಾ ರೈಲಿಗೆ ಖರ್ಚಾಯಿತು. ಕೊನೆಗೆ ಹೆಂಡತಿಯ ಮಾಂಗಲ್ಯವನ್ನು ೩೦ ರೂಪಾಯಿಗಳಿಗೆ ಮಾರಿದ. ಶ್ರೀಶೈಲ ಪ್ರಾಜೆಕ್ಟ್‌ನಲ್ಲಿ ಕೆಲಸ ಸಿಕ್ಕುತ್ತದೆ ಎಂದು ಹೋದಾಗ ಗುಂಟೂರಿನಲ್ಲಿ ಒಂದು ಮಗು ಸತ್ತಿದೆ ೩ ದಿವಸಗಳ ನಂತರ ಶ್ರೀಶೈಲ ಪ್ರಾಜೆಕ್ಟ್‌ಗೆ ಹೋಗುವುದರೊಳಗೆ ಗಂಡ ಸತ್ತಿದ್ದಾನೆ. ಆ ಹೆಣ್ಣು ಮಗಳು ಗಂಡನನ್ನು ಮಾಂಗಲ್ಯವನ್ನು ಮತ್ತು ಒಂದು ಮಗುವನ್ನು ಕಳೆದುಕೊಂಡು, ಉಳಿದ ಒಂದು ಮಗುವನ್ನು ಹೊತ್ತುಕೊಂಡು ಹೇಗೆ ಜೀವನ ನಡೆಸಬೇಕು. ಇಂತಹ ಘಟನೆಗಳು ದೇಶದಲ್ಲಿ ನೂರಾರು ನಡೆದಿವೆ. ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಇದಕ್ಕೆ ಕಾನೂನು ಅಡ್ಡಿಬರುತ್ತದೆ ಎಂದು ಹೇಳಿದರು. ಜೋಳಿಗೆ ಹಿಡಿದು ಅನ್ನಕ್ಕಾಗಿ ಹಂಬಲಿಸುವವನಿಗೆ ಯಾವ ಪಾತ್ರೆಯಲ್ಲಿ ಅನ್ನ ಕೊಡುತ್ತಾರೆ ಎನ್ನುವುದು ಮುಖ್ಯವಲ್ಲ, ಅನ್ನ ಕೊಡುವುದು ಮುಖ್ಯ, ಅನ್ನ ಕೊಡುವುದು, ಅನ್ನ ಕೊಡುವವನ ಕಾರ್ಯ. ಕಾನೂನನ್ನು ರೂಪಿಸಿಕೊಳ್ಳುವ ಸಾಮರ್ಥ್ಯ ನಿಮಗೆ ಇರಬೇಕು. ಆ ಸಾಮರ್ಥ್ಯ ನಿಮ್ಮಲ್ಲಿ ಇಲ್ಲವಾದರೆ ನಾನು ತೋರಿಸಿಕೊಡುತ್ತೇನೆ, ಕಾನೂನನ್ನು ನಾನು ಮಾಡಿಕೊಡುತ್ತೇನೆ, ಮಾನ್ಯ ಅಧ್ಯಕ್ಷಿಣಿಯವರೇ. ಈ ನಿರ್ಣಯವನ್ನು ತಂದಾಗ ನಾನು ಯಾವುದೋ ದುರುದ್ದೇಶದಿಂದ ಅಥವಾ ರಾಜಕೀಯ ಬಣ್ಣವನ್ನು ಬಳಿಯಬೇಕು ಎನ್ನುವ ಉದ್ದೇಶದಿಂದ ತರಲಿಲ್ಲ. ನಿಮ್ಮ ಅಂತರಂಗವನ್ನು ಶೋಧನೆ ಮಾಡಿಕೊಳ್ಳಿ, ನಾನು ಈ ನಿರ್ಣಯವನ್ನು ತಂದಿರುವುದು ಬಡವರ ಸಾಲವನ್ನು ಬಿಡುವುದಕ್ಕೆ. ನಿಮಗೆ ೧೧೨ ಕೋಟಿ ರೂಪಾಯಿಗಳ ಸಾಲ ಇದೆ, ರಿಜರ್ವ್‌ಬ್ಯಾಂಕ್ ಮತ್ತು ಎಲ್.ಐ.ಸಿ.

ಯಿಂದ ಬಂದಿದ್ದು. ಈ ೧೧೨ ಕೋಟಿ ರೂಪಾಯಿಗಳ ವಿತರಣೆ ನೋಡಿದಾಗ, ಕೇವಲ ವೀಕರ್ ಸೆಕ್ಷನ್ ಎಂದು ಏನು ಡೆಫಿನಿಷನ್ ಹಾಕಿದ್ದೀರಿ ಅವರಲ್ಲಿ ಎಷ್ಟು ಜನ ಬರುತ್ತಾರೆ ಎಂದು ಲೆಕ್ಕ ಹಾಕಿದ್ದೀರಾ? ಕನ್ನಡ ಪ್ರಭ· ಪತ್ರಿಕೆಯಲ್ಲಿ ಒಂದು ಲೇಖನ ಬಂದಿದೆ. ರೈತರಿಗಾಗಿ ಇಡೀ ದೇಶದಲ್ಲಿ ಬ್ಯಾಂಕುಗಳು ಕೊಟ್ಟಿರತಕ್ಕ ಸಾಲ ಶೇಕಡ ೩ ಪರ್ಸೆಂಟ್. ಈ ೩ ಪರ್ಸೆಂಟ್ ಸಾಲ ತೆಗೆದುಕೊಂಡಂಥಾವರು ವೀಕರ್ ಸೆಕ್ಷನ್‌ನಲ್ಲಿ ಎಷ್ಟು ಜನ ಬರುತ್ತಾರೆ. ವೀಕರ್ ಸೆಕ್ಷನ್ ಎಂದು ಡೆಫಿನಿಷನ್ ಏನಿದೆ ಅದರಲ್ಲಿ ಎಷ್ಟು ಜನಕ್ಕೆ ಕೊಟ್ಟಿದ್ದಾರೆ. ಈ ೧೧೨ ಕೋಟಿ ರೂಪಾಯಿಗಳೊಳಗೆ ಶ್ರೀಮಂತರೂ ಬರುತ್ತಾರೆ, ಎಲ್ಲವೂ ಬಡವರಿಗೇ ಕೊಡುವುದಿಲ್ಲ. ನವರ್ಮ್ ರಾಜ್ಯಕ್ಕೆ ೮೦೦ ಕೋಟಿ ರೂಪಾಯಿಗಳ ಸಾಲವನ್ನು ತರಿದಿದ್ದೇವೆ, ಆದಕ್ಕೆ ಪ್ರತಿಪರ್ಷ ೫೦ ಕೋಟಿ ರೂಪಾಯಿಗಳ ಬಡ್ಡಿಯನ್ನು ಕೊಡುತ್ತಿದ್ದೇವೆ. ಉದಾಹರಣೆಗೆ ರೆವಿನ್ಯು ಡಿಪಾರ್ಟ್‌ಮೆಂಟ್‌ನ್ನು ತೆಗೆದುಕೊಂಡರೆ ಇದರಲ್ಲಿ ಪ್ರತಿವರ್ಷ ೫೦ ಕೋಟಿ ರೂಪಾಯಿಗಳನ್ನು ನಾವು ವಸೂಲುಮಾಡಿಲ್ಲ. ಈ ೫೦ ಕೋಟಿ ರೂಪಾಯಿ ಡೆಟ್‌ಕ್ಯಾಪಿಟಲ್ ಆಗುತ್ತಿದೆ. ಇವತ್ತಿನದಿವಸ ನಾವು ಬಡ್ಡಿಯನ್ನು ಏನು ಕೊಡುತ್ತಿದ್ದೇವೆ. ಇದು ಜನರು ಕೊಟ್ಟಂಥ ದುಡ್ಡು. ಇಡೀ ದೇಶದೊಳಗೆ ವಿದ್ಯುಚ್ಛಕ್ತಿ ಇಲಾಖೆ ಒಂದರಲ್ಲೇ ೧೦೦ ಕೋಟಿ ರೂಪಾಯಿಗಳಂ ಹೋಗಿದೆ. ಇದು ಯಾರ ಹಣ, ಜನರ ಹಣ. ಬಡವರಿಗೆ ೪ ಕಾಸು ಕೊಡುವುದಕ್ಕೆ ಇಲ್ಲ ಎಂದು ಹೇಳುತ್ತೀರಿ ಶ್ರೀಮತಿ ಇಂದಿರಾಗಾಂಧಿಯವರು, ಸಂಜಯಗಾಂಧಿಯವರು ರಾಜ್ಯಕ್ಕೆ ಬಂದರೆ ೨೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಅವಕಾಶವಿದೆಯೇ.

(ಆಡಳಿತ ಪಕ್ಷದ ನಾಲ್ಕೈದು ಜನ ಸದಸ್ಯರು ಒಟ್ಟಿಗೆ ನಿಂತು ಮಾತನಾಡತೊಡಗಿದರು ಸಭೆಯಲ್ಲಿ ಗೊಂದಲ ವಾತಾವರಣ ಉಂಟಾಯಿತು)

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

ಶ್ರೀ ಬಿ. ಭಾಸ್ಕರಶೆಟ್ಟಿ.— ಶ್ರೀಯುತ ಚರಣ್ ಸಿಂಗರ ಜನ್ಮದಿನೋತ್ಸವಕ್ಕೆ ಎಷ್ಟು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ, ಎಷ್ಟು ಲಾರಿ, ಎಷ್ಟು ಬಸ್‌ಗಳು ಬಂತು ಎನ್ನುವುದನ್ನು ಹೇಳಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಸ್ವಾಮಿ, ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ ಮಾನ್ಯ ಸದಸ್ಯರಾದ ಗಂಗಾಧರನ್ ಅವರು ಭಾಷಣಮಾಡುವಾಗ ಶ್ರೀಮತಿ ಇಂದಿರಾಗಾಂಧಿಯವರು, ಸಂಜಯಗಾಂಧಿಯವರು ರಾಜ್ಯಕ್ಕೆ ಬಂದಾಗ ಸರ್ಕಾರ ಕೋಟಿಗಟ್ಟಲೆ ಖರ್ಚುಮಾಡಿತು, ಬಡವರಿಗೆ ಸಾಲ ಬಿಡಲಿಕ್ಕೆ ಆಗುವುದಿಲ್ಲ ಎಂದೂ ಹೇಳಿದರು. ತಾವು ಹಿಂದೆ ಇಂತಹ ವಿಷಯಗಳು ಬಂದಾಗ ಹೆಸರುಗಳನ್ನು ಉಲ್ಲೇಖ ಮಾಡಬಾರದು ರೂಲಿಂಗ್ ಕೊಟ್ಟಿದ್ದೀರಿ. ಮಾನ್ಯ ಸದಸ್ಯರು ಇವತ್ತು ಪುನಃ ಹೆಸರುಗಳನ್ನು ಹೇಳುತ್ತಿದ್ದಾರೆ, ದಯವಿಟ್ಟು ಅವನ್ನು ಎಕ್ಸ್‌ಪಂಜ್‌ಮಾಡಿಸಿ.

ಅಧ್ಯಕ್ಷರು.—ಮಾನ್ಯ ಗಂಗಾಧರನ್ ಅವರೇ ಈ ರೀತಿ ನೀವು ಹೆಸರುಗಳನ್ನು ಉಲ್ಲೇಖ ಮಾಡಬಾರದು, ಆ ರೀತಿ ಮಾಡುವುದನ್ನು ಬಿಟ್ಟು ಮಾತನಾಡಿ.

ಶ್ರೀ ಎಚ್. ಗಂಗಾಧರನ್.—ಮಾನ್ಯ ಶೀರ್ನಾಳಿ ಚಂದ್ರಶೇಖರ್ ಅವರು ಕ್ರಿಯಾಲೋಪವನ್ನು ಎತ್ತಿದರು, ಅದು ಯಾವ ಪ್ರೊಸಿಜರೋ ಗೊತ್ತಾಗಲಿಲ್ಲ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಅವರು ಉಲ್ಲೇಖ ಮಾಡಿರತಕ್ಕ ಹೆಸರುಗಳನ್ನು ಎಕ್ಸಪಂಜ್ ಮಾಡುವುದಕ್ಕೆ ತಾವು ಆರ್ಡರ್ ಮಾಡಬೇಕು.

ಅಧ್ಯಕ್ಷರು.—ಅದನ್ನು ನಾನು ನೋಡುತ್ತೇನೆ.

ಶ್ರೀ ಎಚ್. ಗಂಗಾಧರನ್.—ಈ ರೀತಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡತಕ್ಕ ಸರ್ಕಾರ ಬಡವರಿಗಾಗಿ ಒಂದೆರಡು ಕೋಟಿ ರೂಪಾಯಿಗಳನ್ನು ಬಿಡುವುದಕ್ಕೆ ಏಕೆ ಹಿಂಜರಿಯುತ್ತದೆಯೋ ನನಗೆ ಗೊತ್ತಿಲ್ಲ. ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ, ಕೋ ಆಪರೇಟೀವ್ ಸೊಸೈಟಿಗಳ ಬಗ್ಗೆ ಅಭಿಮಾನವಿರತಕ್ಕ ಮಾನ್ಯ ಸಚಿವರು ಹೇಳಿದರು, ನಮ್ಮ ರಾಜ್ಯದಲ್ಲಿ

ಇವತ್ತಿನವರೆಗೆ ಕೋ ಆಪರೇಟೀವ್ ಸೊಸೈಟಿಗಳಿಂದ ಮಿಸ್ ಅಪ್ರೊಪ್ರಿಯೇಷನ್ ಆಗಿದ್ದು ರೈಟಾಫ್ ಆಗಿರುವುದು ಬ್ಯಾಡ್ ಡೆಟ್ಸ್ ೨೦ ಕೋಟಿ ರೂಪಾಯಿ ಆಗಿದೆ ಎಂದು ಮಾನ್ಯ ಅಧ್ಯಕ್ಷರ ತಾಲ್ಲೂಕಿನಲ್ಲಿ ರತಕ್ಕ ಸೊಸೈಟಿಯಲ್ಲಿ ಎಷ್ಟು ಹಣ ಹೋಗಿದೆ ಎನ್ನುವುದು ಅವರಿಗೆ ಗೊತ್ತಿದೆ ಈ ರೀತಿ ಕೋಟಿಗಟ್ಟಲೆ ಹಣ ಹೋಗಿರುವಾಗ ವೀಕರ್ ಸೆಕ್ಷನ್‌ಗೆ ಕೇವಲ ಒಂದೆರಡು ಕೋಟಿ ರೂಪಾಯಿಗಳನ್ನು ಬಿಡಲಿಕ್ಕೆ ಈ ಸರ್ಕಾರಕ್ಕೆ ಚೈತನ್ಯವಿಲ್ಲವೇ ಎಂದು ನಾನು ಪ್ರಶ್ನೆ ಹಾಕುತ್ತೇನೆ. ಮಾನ್ಯ ಮಂತ್ರಿಗಳು ಬ್ಯಾಂಕಿನಿಂದ ಕೊಡುವುದಕ್ಕೆ ನಮಗೆ ಕಾನೂನಿಲ್ಲ ಎಂದು ಹೇಳಿದರು. ನನ್ನ ಹತ್ತಿರ ಅಂಕಿ ಅಂಶಗಳ ಆಧಾರವಿದೆ. ನಮ್ಮಲ್ಲಿ ೧೪ ರಾಷ್ಟ್ರೀಕೃತ ಬ್ಯಾಂಕುಗಳಿವೆ. ನಾನು ಈ ಎಲ್ಲಾ ಬ್ಯಾಂಕುಗಳ ವಿಚಾರವನ್ನು ಹೇಳುವುದಿಲ್ಲ. ಅಲಹಾಬಾದ್ ಬ್ಯಾಂಕ್‌ನಲ್ಲಿ ಪೈಡ್ ಅಪ್ ಕ್ಯಾಪಿಟಲ್ ೧೦೫ ಕೋಟಿ ರೂಪಾಯಿಗಳು, ೧೯೭೫ ರಲ್ಲಿ ೮೦ ಕೋಟಿ ರೂಪಾಯಿಗಳೇ ಲಾಭ ಬಂದಿದೆ. ೧೯೭೬ ರಲ್ಲಿ ೯೬ ಕೋಟಿ ರೂಪಾಯಿಗಳ ಲಾಭ ಬಂದಿದೆ. ಈ ೧೪ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಒಂದು ವರ್ಷಕ್ಕೆ ೬೦–೬೫ ಪರ್ಸೆಂಟ್ ಪ್ರಾಫಿಟ್ ಬಂದಿದೆ.

ಶೇಕಡ ೬೦ ರಿಂದ ೭೦ ರವರೆಗೆ ಅಂದರೆ ೧೯೪ ಕೋಟಿ ರೂಪಾಯಿಗಳು ೧೯೭೬ ರಲ್ಲಿ ಬಂದರೆ ಕೆನರಾ ಬ್ಯಾಂಕ್‌ನಲ್ಲಿ ೨೩೩ ಕೋಟಿ ಹೀಗೆ ೧೪ ನ್ಯಾಶನಲೈಜ್ಡ್ ಬ್ಯಾಂಕ್‌ಗಳ ಲೆಕ್ಕಗಳು ನನ್ನ ಹತ್ತಿರ ಇವೆ. ನಾನ್ ಶೆಡ್ಯೂಲ್ ಬ್ಯಾಂಕ್‌ಗಳ ಲೆಕ್ಕ ತಮಗೆ ಹೇಳುವುದಾದರೆ ಮೈಸೂರು ಬ್ಯಾಂಕ್‌ನಲ್ಲಿ ೧೯೭೫ ರಲ್ಲಿ ೧೬.೯೦ ಲಕ್ಷ ಲಾಭ ಮಾಡಿದ್ದರೆ ೧೯೭೬ ರಲ್ಲಿ ೧೮.೯೧ ಲಕ್ಷ ಲಾಭ ಮಾಡಿದ್ದಾರೆ. ಇಂಡಿಯನ್ ಬ್ಯಾಂಕ್ ೧೯೭೬ ೫೬.೩೯ ಲಕ್ಷ ಲಾಭ ಮಾಡಿದ್ದರೆ ಈ ವರ್ಷವೂ ಕೂಡ ಶೇಕಡ ೨೫ ರಿಂದ ೫೦ ರವರಿಗೆ ಹೆಚ್ಚು ಲಾಭವನ್ನು ಸಂಪಾದನೆ ಮಾಡುತ್ತಾ ಬಂದಿವೆ. ಬ್ಯಾಂಕ್‌ಗಳು ಸಾಕಷ್ಟು ದಷ್ಟಪುಷ್ಟವಾಗಿ ಬೆಳೆಯುತ್ತಾ ಬಂದಿವೆ. ಇಷ್ಟು ಹಣ ಬೆಳೆಯಬೇಕಾದರೆ ಏನಾದರೂ ಬ್ಯಾಂಕಿನವರು ಡಬ್ಬಲ್ ಮಾಡಿದ್ದಾರೆಯೇ? ಇಷ್ಟು ಲಾಭ ಬರಬೇಕಾದರೆ ಕಾರಣವೇನು? ಇವತ್ತು ಕೆಲವರು ಬ್ಯಾಂಕ್‌ನಲ್ಲಿ ಹಣವನ್ನು ಇಟ್ಟಾಕ್ಷಣ ಅದು ಜಾಸ್ತಿಯಾಗಿಲ್ಲ ಆ ಹಣವನ್ನು ಉಪಯೋಗಿಸಿದ ಯಾವ ಫ್ಯಾಕ್ಟರಿಯಲ್ಲಿ ಕೆಲಸ ಮಾಡತಕ್ಕ ನೌಕರರಿದ್ದಾರೆ; ರೈತರಿದ್ದಾರೆ ಅವರ ದುಡಿಮೆಯ ಶ್ರಮದ ಫಲದಿಂದ ಇವತ್ತು ಅದು ಹೆಚ್ಚುವುದಕ್ಕೆ ಸಾಧ್ಯವಾಗಿದೆ. ಅದರೆ ಮಾನ್ಯ ಮಂತ್ರಿವರ್ಯರು ನಾನು ತಂದಿರತಕ್ಕ ನಿರ್ಣಯವನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು ನಾನು ಕೇಳುತ್ತೇನೆ ಇವತ್ತು ಸರ್ಕಾರ ಬಡ ಜನರ ಮೇಲೆ ಅಭಿಮಾನವಿರುವುದಾದರೆ ಸರ್ಕಾರವೇ ನಾದರೂ ದಿವಾಳಿ ಎದ್ದಿದೆಯೇ? ಇಲ್ಲ ಇವತ್ತು ಸರ್ಕಾರ ತನ್ನ ಎಲ್ಲಾ ಖರ್ಚು ವೆಚ್ಚಗಳನ್ನೂ ಕಡಿಮೆ ಮಾಡಿದರೆ ನಿಜವಾಗಿಯೂ ಬಡ ರೈತರ ಮೇಲೆ ಅಭಿಮಾನವಿದ್ದರೆ, ದೀನ ದಲಿತರಿಗೆ ತಾವು ಖರ್ಚು ಮಾಡತಕ್ಕ ಹಣ ಅದು ಎಷ್ಟು ಬರುತ್ತದೆ ಎಂದರೆ ೨೦ ಕೋಟಿ ರೂಪಾಯಿಗಳು ಮಾತ್ರ ಸರ್ಕಾರದಿಂದ ಖರ್ಚಾಗಬಹುದು. ಇವತ್ತು ಸರ್ಕಾರಕ್ಕೆ ಬಡಜನಕ್ಕೆ ಕೊಡಬೇಕು ಎನ್ನತಕ್ಕ ವಿಶಾಲ ಹೃದಯವಂತಿಕೆ ಇದ್ದಲ್ಲಿ, ಕೊಡುತ್ತೀರೆಯೇ ಹೊರತು ಕೊಡಬಾರದು ಎನ್ನತಕ್ಕದ್ದು ಏನೂ ಇಲ್ಲ. ತಾವು ಕೇಂದ್ರ ಸರ್ಕಾರದವರನ್ನು ಕೇಳಿ ಅಂತ ಹೇಳುತ್ತಿದ್ದೀರಿ ಅದರೆ ಕೇಂದ್ರ ಸರ್ಕಾರದವರ ಪ್ರಶ್ನೆ ಇಲ್ಲಿ ಏನೂ ಇಲ್ಲ. ನಾನು ಪಾರ್ಲಿಮೆಂಟ್ ಸದಸ್ಯನಾಗಿಲ್ಲ ಆಗಿದ್ದರೆ ಅಲ್ಲಿ ಕೇಂದ್ರ ಸರ್ಕಾರದಲ್ಲಿ ಇದನ್ನು ಪ್ರಸ್ತಾಪ ಮಾಡುತ್ತಿದ್ದೆ. ಇವತ್ತು ರೈತರು ಸೊಸೈಟಿಗಳಲ್ಲಿ ಬಾಂಕ್‌ಗಳಲ್ಲಿ ಹಣವನ್ನು ಸಾಲವಾಗಿ ತೆಗೆದುಕೊಂಡಿದ್ದರೆ ಅದನ್ನು ಬಿಟ್ಟು ಕೊಡಿ. ಅವರು ಬಿಟ್ಟು ಕೊಡುವುದಕ್ಕೆ ಒಪ್ಪದಿದ್ದಲ್ಲಿ ಅದನ್ನು ನೀವೆ ರಿಇಂಬರ್ಸ್ ಮಾಡಿ. ಇದನ್ನು ತಾವು ತುಲನಾತ್ಮಕ ದೃಷ್ಟಿಯಿಂದ ವಿಚಾರ ಮಾಡಬೇಕಾಗಿದೆ. ಇವತ್ತು ಗಂಗಾಧರನ್ ರವರು ತಿದ್ದುಪಡಿ ತಂದಿದ್ದಾರೆ ಇದನ್ನು ಒಪ್ಪಿಕೊಂಡು ಬಿಟ್ಟರೆ ಮಾನ್ಯ ಮುಖ್ಯಮಂತ್ರಿಗಳವರ ಸೀಟ್‌ಗೆ ಏನೂ ತೊಂದರೆಯಾಗುವುದಿಲ್ಲ, ಅವರ ಗದ್ದುಗೆಗೆ ಏನೂಧಕ್ಕೆ ಉಂಟಾಗುವುದಿಲ್ಲ ಎಂಬುದನ್ನು ಮಾನ್ಯ ಮಂತ್ರಿಯವರು ಗಮನಿಸಬೇಕಾಗಿದೆ. ಕೊನೆಯದಾಗಿ, ಇದು ನಿಜವಾಗಿಯೂ ಬಡಪರಿಗೆ ತುಂಬಾ ಉಪಕಾರಿಯಾಗಿರತಕ್ಕ ತಿದ್ದುಪಡಿಯಾಗಿರುವುದರಿಂದ ಇದನ್ನು ಸರ್ವಾನುಮತದಿಂದ ಎಲ್ಲರೂ ಒಪ್ಪಬೇಕೆಂದು ಕೇಳಿಕೊಂಡು, ಹೆಚ್ಚು ಸಮಯವಿಲ್ಲದೆ ಇರುವುದರ ಪ್ರಯುಕ್ತ ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

MR. SPEAKER.—I will put the Motion to the vote of the House. The question is:

"That this Assembly recommends to Government to bring an amendment to the Karnataka Debt Relief Act to relieve the weaker

section of the communities from the Debts advanced by the Banks, Government and Co-operative Societies".

The Motion was negatived and Resolution was lost

MR. SPEAKER.—Sri Ramadev may please move his Resolution.

(*ii*) *re: providing Civic amenities to Slum dwellers Bangalore City*

SRI P. RAMADEV.—Sir, I move;

"That this Assembly recommends to Government to provide all essential civic amenities to the people residing in slum areas of Bangalore City since several years".

The question was proposed.

The House now stands adjourned to meet at 1-00 P. M. tomorrow

The House adjourned at Thirty seven minutes past Six of the Clock to meet again at One of the Clock on Wednesday the 9th August 1978.